ಹಿತ್ತಲ ಗಿಡ

ಚಾತುರ್ಮಾಸಿಕ

ತಳಮಟ್ಟದ ಜನರಿಗೆ ಪ್ರತಿಫಲ
ನೀಡುವಂತಹ ತಂತ್ರಜ್ಞಾನ, ಸಂಸ್ಥೆ
ಮತ್ತು ಮೌಲ್ಯಗಳನ್ನು ಹುಟ್ಟು
ಹಾಕುವತ್ತ ಕೈಜೋಡಿಸೋಣ

ಪೈರು 14, ಕೊಯಿಲು 2-3, ಮೇ - ಡಿಸೆಂಬರ್, 2008

ದೇವರು ಸೃಷ್ಟಿಸಿದ ಬೆಳೆಗಳು





























ಈ ಸಂಚಿಕೆಯಲ್ಲಿ

ಸಂಪಾದಕೀಯ 1-2

ಚಂಡು ಹೂ ಬೇಸಾಯ, 2-2

ದೇಶೀಯ ಜಾಣ್ಮೆ, ನಿರಂತರ ಬಾಳೆ ಬೆಳೆ 3-4

ಹಗೇವು -4

ಗರತಿ -5

ಪುಣ್ಯಕೋಟಿ 6 - 7

ಬ್ರಹ್ಮಾಸ್ತ್ರ -ದೇಶೀಯ ಹತೋಟಿ - 8

ಜೀವ ಪೊರೆಯುವ ಜಲನಿಧಿಗಳು - 9

ಜೀವವೈವಿಧ್ಯ -11

ಅಳಲೆಕಾಯಿ -11

ಕಾಡು ಪ್ರಾಣಿಗಳಿಂದ ಬೆಳೆ ರಕ್ಷಣೆ -12

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ಪಾರಂಪರಿಕ ಆಹಾರ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಸಂಪಾದಕ ಮಂಡಳಿ

ಗೌರವ ಸಂಪಾದಕ :

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಪ್ರಾಧ್ಯಾಪಕ ಕೃಷಿ ಅರ್ಥ ಶಾಸ್ತ್ರ,

ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು

ಉಪ ಸಂಪಾದಕಿ: **ಡಾ। ತೇಜಸ್ವಿನಿ ಶರ್ಮ**

ಲೇಖನ ಪರಿಷ್ಕಾರ: **ಪಿ.ಎಸ್. ಶ್ರೀಕಂಠ ಮೂರ್ತಿ ಮತ್ತು ಮೀನಾಕ್ಷಿ ಶರ್ಮ**

ಪ್ರಕಟಣಾ ಸಹಾಯಕರು:

ಪವಿತ್ರ .ಹೆಚ್, ಸುಮತಿ ಅರವ , ವಿನಯ್, ಆದರ್ಶ, ಮರಿಲಿಂಗಯ್ಯ

ತಾಂತ್ರಿಕ ಸಲಹೆ : **ಪ್ರೊ. ಸಹಸ್ರನಾಮ್**

ಅಂತರ್ಜಾಲ ನೆರವು : **ಅಭಿಶೋದ್ ಪಿ.**

ಹನಿಬೀ ಬಳಗ

Honey Bee (*English*)

Prof. Anil K.Gupta, Indian Institute of Management, Vastrapur, Ahmedabad - 380 015, Ph: 079-26307241 email: anilg@nifindia.org, honeybee@sristi.org

Ama Akha Pakha (*Oriya*)

Dr. Balaram Sahu, 3R BP 5/2, BP Colony, Unit-8, Bhubaneswar - 751 012, Orissa, balaram_sahu@hotmail.com

Loksarvani (*Gujarati*)

Dilip Koradiya, SRISTI P.O.Box 15050 Ahmedabad, Gujarat - 380015, loksarvani@sristi.org

Makhir (*Pahari*)

Dr.A.Chandan, ERA, Khundian, District Kangra, Himachal Pradesh - 176030, makhir@epatra.com

Num Vali Velanmai (*Tamil*)

P. Vivekanandan, 45, TPM Nagar, Virattipathu Tamil Nadu - 625 010, numvali@vsnl.com

Sujh-Bujh Aas Paas Ki (*Hindi*)

Shalini Sharma, H-12 ODS Flats Lajpat Nagar 4 New Delhi - 110024, sujhbuj@sristi.org

Palle Srujana (*Telugu*)

Brig. (Retd.) P.Ganesham,
55. Vayupuri. Secunderabad - 500 094 (A.P.)
Ph. : 040-27118555
honeybeeap@gmail.com

and

Hittalagida (*Kannada*)

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology, Values & Institutions), Bangalore, **SRISTI** (Society for Research and Initiatives for Sustainable Technologies and Institutions), & **NIF** (National Innovation Foundation, India), Ahmedabad

ಸಂಪಾದಕೀಯ

ತೃಣಧಾನ್ಯಗಳ ತುಷ್ಟಿಗುಣ

ಆಹಾರ, ಊಟ ಎಂದೊಡನೆ ದಕ್ಷಿಣ ಭಾರತೀಯರ ಕಣ್ಮುಂದೆ ಫಕ್ಕನೆ ಬರುವುದು ಅಕ್ಕಿ ಮತ್ತು ಅದರಿಂದ ಮಾಡಿದ ಅನ್ನ. ಅದೇ,ಉತ್ತರ ಭಾರತೀಯರಿಗೆ ಗೋಧಿ ಮತ್ತು ರೊಟ್ಟಿ. ಇದಕ್ಕೆ ಸ್ವಲ್ಪ ಅಪವಾದವೋ ಎನ್ನುವ ಹಾಗೆ ಅಲ್ಲಲ್ಲಿ ಕೆಲ ಬುದ್ಧಿವಂತ ಜನ ರಾಗಿಮುದ್ದೆ (ಹಳೆ ಮೈಸೂರು ಪ್ರಾಂತ್ಯ) ಅಥವಾ ಜೋಳದ ರೊಟ್ಟಿ (ಉತ್ತರ ಕರ್ನಾಟಕ) ಗಳನ್ನು ತಮ್ಮ ಆಹಾರವಾಗಿ ಉಪಯೋಗಿಸುತ್ತಿರುವರು. ಅಕ್ಕಿ, ಗೋಧಿಗೆ ಹೋಲಿಸಿದಲ್ಲಿ ರಾಗಿ ಮತ್ತು ಜೋಳದಲ್ಲಿ ರುಚಿ ಮತ್ತು ಪೌಷ್ಠಿಕತೆ ದುಪ್ಪಟ್ಟು ಅಧಿಕವಾಗಿರುತ್ತದೆ. ಆದರೆ ಈ ರಾಗಿ, ಜೋಳವನ್ನೂ ಮೀರಿದ ಸಾಮೆ, ನವಣೆ, ಸಜ್ಜೆ, ಆರ್ಕ, ಬರಗುಗಳಂತಹ ಕೆಲ ತೃಣ ಧಾನ್ಯಗಳಿವೆ.ಇವುಗಳ ರುಚಿ, ಪೌಷ್ಠಿಕತೆ, ಆರೋಗ್ಯ ಅಂಶಗಳಿಗೆ ಇತಿ ಮಿತಿಯೇ ಇರುವುದಿಲ್ಲ. ಇವು ಬರವಿರಲಿ ಬರಡು ಮಣ್ಣಿರಲಿ, ಕ್ರಿಮಿಕೀಟಗಳ ಹಾವಳಿಯಿರಲಿ ಏನೇ ಅಡೆ ತಡೆಗಳಿರಲಿ ಅವನ್ನು ಮೀರಿ ಮೇಲೆದ್ದು ಪೈರು ನೀಡುವ ತಾಕತ್ತಿರುವಂತಹ ಬೆಳೆಗಳು.

ಆಹಾರ ಅಥವಾ ಪೌಷ್ಠಿಕಾಂಶದ ಕೊರತೆಯಿರಬಹುದು, ನೀರು ಅಥವಾ ಇಂಧನದ ಸಮಸ್ಯೆಗಳಿರಬಹುದು, ಇಂದು ಕೃಷಿರಂಗ ಎದುರಿಸುತ್ತಿರುವ ಎಲ್ಲಾ ಬಿಕ್ಕಟ್ಟುಗಳಿಗೆ ಈ ತೃಣಧಾನ್ಯಗಳು ಸಿದ್ಧೌಷದ ಎನ್ನಿಸುವಂತಿವೆ ಹಾಗಾಗಿಯೇ, ಈ ತೃಣಧಾನ್ಯಗಳನ್ನು ಸಂರಕ್ಷಿಸಿ ಆ ಮೂಲಕ ಒಂದು ಪರ್ಯಾಯ ಆಹಾರ ವ್ಯವಸ್ಥೆಯನ್ನೇ ನಿರ್ಮಿಸಿರುವ ಹೈದರಾಬಾದು ಮೂಲದ 'ಡೆಕ್ಕನ್ ಡೆವಲಪ್‌ಮೆಂಟ್ ಸಂಸ್ಥೆ' ಇವುಗಳನ್ನು **"ದೇವರು ಸ್ವಯಂ ಸೃಷ್ಟಿಸಿದ ಬೆಳೆಗಳು"** ಎಂದು ವರ್ಣಿಸುತ್ತದೆ.ಹಾಗಿದ್ದರೂ ಇಂದು ನಮ್ಮ ಆಹಾರ ವ್ಯವಸ್ಥೆ ಹೆಚ್ಚೂ ಕಡಿಮೆ ಅಕ್ಕಿ ಮತ್ತು ಗೋಧಿ ಈ ಎರಡೇ ಧಾನ್ಯಗಳ ಮೇಲೆ ನಿಲ್ಲುವಂತಾಗಿರುವುದು ಆಹಾರ, ಪೌಷ್ಠಿಕತೆ ಮತ್ತು ಸುಸ್ಥಿರ ಕೃಷಿ ಬಗೆಗಿನ ನಮ್ಮ ಅಸೀಮ ನಿರ್ಲಕ್ಷ್ಯ ಮತ್ತು ಅಜ್ಞಾನ ಮಾತ್ರವಲ್ಲ ಮೂರ್ಖತನದ ಪರಮಾವಧಿ ಕೂಡ ಎನ್ನದೇ ವಿಧಿಯಿಲ್ಲ.

ಪೌಷ್ಠಿಕತೆಯ ಕಣಜ: ಪ್ರತಿ 100 ಗ್ರಾಂ ತೃಣಧಾನ್ಯಗಳಲ್ಲಿರುವ ವಿವಿಧ ಪೌಷ್ಟಿಕದಾಯಕ, ಹಾಗೇ ಆರೋಗ್ಯವರ್ಧಕ ಅಂಶಗಳನ್ನು ಅಕ್ಕಿಗೆ ಹೋಲಿಸಿ ಪಟ್ಟಿ ಒಂದನ್ನು ಪುಟ 5 ರಲ್ಲಿ ಕೊಡಲಾಗಿದೆ.

ಈ ಪಟ್ಟಿ ಅವಲೋಕಿಸಿದಾಗ, ತೃಣಧಾನ್ಯಗಳು ಎಲ್ಲಾ ಅಂಶಗಳಲ್ಲೂ ಅಕ್ಕಿಗಿಂತ ಬಹಳಷ್ಟು ಉತ್ತಮವಾಗಿರುವುದು ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಅಕ್ಕಿಗೆ ಹೋಲಿಸಿದಲ್ಲಿ ಸುಮಾರು 33 ಪಟ್ಟು ಅಧಿಕ ಕ್ಯಾಲ್ಸಿಯಂ ಲವಣಾಂಶ ರಾಗಿಯಲ್ಲಿ ಲಭ್ಯವಿದ್ದರೆ ಶೇ. 85ರಷ್ಟು ಅಧಿಕ ರಂಜಕ ಸಜ್ಜೆಯಲ್ಲಿರುತ್ತದೆ. ಇವೆರಡೂ ಮನುಷ್ಯನ ವಸಡು ಮತ್ತು ಮೂಳೆಗಳು ಗಟ್ಟಿಮುಟ್ಟಾಗಿರಲು ಅವಶ್ಯಕವಾಗಿರುತ್ತವೆ. ಆರೋಗ್ಯವಂತ ಮನುಷ್ಯ ದಿನನಿತ್ಯ 400 ರಿಂದ 500 ಮಿಲಿ ಗ್ರಾಂ ಕ್ಯಾಲ್ಸಿಯಂ ಸೇವಿಸಬೇಕು.ಇದು ಒಂದು ಹೊತ್ತು ರಾಗಿ ಮುದ್ದೆ ಊಟದಿಂದ ಸುಲಭವಾಗಿ ಲಭ್ಯವಾಗುತ್ತದೆ. ಹಾಗೇ ಅಕ್ಕಿಗೆ ಹೋಲಿಸಿದಲ್ಲಿ ನವಣೆಯಲ್ಲಿ ಶೇ.81ರಷ್ಟು ಅಧಿಕ ಪ್ರೋಟೀನ್, ಆರ್ಕದಲ್ಲಿ 64 ಪಟ್ಟು ಅಧಿಕ ಲವಣಾಂಶ, ಸಾಮೆಯಲ್ಲಿ 3.50 ಪಟ್ಟು ಅಧಿಕ ಪಚನಕ್ರಿಯೆಗೆ ಅಗತ್ಯವಾದ ನಾರಿನ ಅಂಶ, 8.40 ಪಟ್ಟು ಅಧಿಕ ಕೊಬ್ಬಿನ ಅಂಶ, ಹಾಗೇ 13 ಪಟ್ಟು ಅಧಿಕ ರಕ್ತ ವರ್ಧನೆಗೆ ಅಗತ್ಯವಾದ ಕಬ್ಬಿಣದ ಅಂಶವಿರುತ್ತದೆ. ಇನ್ನು ದೇಹದ ಸಹಜ ಆರೋಗ್ಯ ಮತ್ತು ಬೆಳವಣಿಗೆಗೆ ಅತ್ಯಗತ್ಯವಾಗಿರುವ ಎಲ್ಲಾ ಜೀವ ಸತ್ವಗಳೂ ಈ ತೃಣಧಾನ್ಯಗಳಲ್ಲಿ ಹೇರಳವಾಗಿರುತ್ತವೆ. ಉದಾಹರಣೆಗೆ ಸಜ್ಜೆಯಲ್ಲಿ ದೃಷ್ಟಿಕ್ರಿಯೆ ಸರಾಗವಾಗಿರಲು ಅಗತ್ಯವಾದ ಎ ಜೀವಸತ್ವ ಮತ್ತು ಹಲವು ಬಿ ಜೀವಸತ್ವಗಳು, ನವಣೆಯಲ್ಲಿ ಥೈಯಾಮಿನ್ ಜೀವಸತ್ವ ಮತ್ತು ಆರ್ಕದಲ್ಲಿ ನೈಸಿನ್ ಜೀವಸತ್ವ ಹೇರಳವಾಗಿವೆ.

ಇನ್ನೂ ಸರಳವಾಗಿ ಹೇಳಬೇಕೆಂದರೆ ಒಂದು ಹೊತ್ತು ಸಜ್ಜೆ ರೊಟ್ಟಿ ಊಟ ಮಾಡಿದಲ್ಲಿ ದೇಹಕ್ಕೆ ಅಗತ್ಯವಿರುವಷ್ಟು ಕ್ಯಾರೆಟ್‌ನಿಂದ ಸಿಗಬಹುದಾದ ಎ ಜೀವಸತ್ವ, ನವಣೆ ಅನ್ನ ತಿಂದಲ್ಲಿ ಒಂದು ಕೋಳಿ ಮೊಟ್ಟೆಯಿಂದ ಸಿಗುವಷ್ಟು ಪ್ರೊಟೀನ್, ಒಮ್ಮೆ ರಾಗಿ ಮುದ್ದೆ ಊಟ ಮಾಡಿದಲ್ಲಿ ಮೂರು ಲೋಟ ಹಾಲು ಕುಡಿದಾಗ ಸಿಗುವಷ್ಟು ಕ್ಯಾಲ್ಸಿಯಂ ಹಾಗೇ ಒಂದು ಸಾರಿ ಸಾಮೆ ಉಪ್ಪಿಟ್ಟು ತಿಂದಲ್ಲಿ 50 ಗ್ರಾಂ ಸೊಪ್ಪಿನಿಂದ ಸಿಗುವಷ್ಟು ಕಬ್ಬಿಣದ ಅಂಶ ದೇಹಕ್ಕೆ ಸುಲಭವಾಗಿ ಸಿಗುವಂತಾಗುತ್ತದೆ.

ಈ ಮೊಟ್ಟೆ, ಹಾಲು, ಕ್ಯಾರೆಟ್, ಸೊಪ್ಪುಗಳು ನಮ್ಮ ಕೆಳವರ್ಗದ ಜನರಿಗೆ ಕನಸಿನ ಮಾತೇ ಆಗಿರುವುದರಿಂದ ಪೌಷ್ಟಿಕಾಂಶದ ವಿಚಾರದಲ್ಲಿ ಈ ತೃಣಧಾನ್ಯಗಳನ್ನು **"ಬಡವರ ಬಂಗಾರ"** ವೆಂದೇ ಕರೆಯಬಹುದು. ಆದರೆ ಇಂತಹ ಸಮೃದ್ಧ ಆಹಾರವನ್ನು ಕಡೆಗಣಿಸಿರುವುದು ಮಾತ್ರವಲ್ಲ ಇದಕ್ಕೆ "ಕಳಪೆ ಧಾನ್ಯಗಳು" (Inferior Cereals) ಎಂದು ನಾಮಕರಣ ಮಾಡಿರುವ ನಮ್ಮ ಮೇಲ್ವರ್ಗದ ಮೌಢ್ಯ ನೋಡಿ ನಗಬೇಕೋ ಅಳಬೇಕೋ ತಿಳಿಯದಾಗಿದೆ.

ಅಳಿವಿನಂಚಿನಲ್ಲಿ ತೃಣಧಾನ್ಯಗಳು : ಈ ಮೌಢ್ಯಕ್ಕೆ ಪೂರಕವಾದ ಕೆಲ ಅಂಕಿ ಅಂಶಗಳನ್ನು ನೋಡೋಣ. ಭಾರತ ಹಸಿರು ಕ್ರಾಂತಿ ಹರಿಸಿದ ನಂತರದ ವರ್ಷದಿಂದ (1960) ಇತ್ತೀಚಿನ ವರ್ಷಗಳವರೆಗೆ ತೃಣಧಾನ್ಯಗಳನ್ನು ಬೆಳೆಯುತ್ತಿದ್ದ ಕೃಷಿ ಭೂಮಿಯ ಪ್ರಮಾಣ ಸುಮಾರು ಅರ್ಧದಷ್ಟು ಕಡಿಮೆಯಾಗಿದೆ. ಇವುಗಳ ಜಾಗವನ್ನು ಎಣ್ಣೆಕಾಳುಗಳು, ಹತ್ತಿ, ಕಬ್ಬು, ಹಣ್ಣು ಮತ್ತು ತರಕಾರಿ ಬೆಳೆಗಳು ಆಕ್ರಮಿಸಿದ್ದು,ಆಶ್ಚರ್ಯವೆಂದರೆ ಈ ಪ್ರಕ್ರಿಯೆಗೆ ಇಂದು ಬೆಳೆ ವೈವಿಧ್ಯಕರಣ (Crop Diversification) ಎಂದು ವೈಭವೀಕರಿಸಲಾಗುತ್ತಿದೆ. ತೃಣಧಾನ್ಯಗಳ ಇಳುವರಿ ಕಡಿಮೆ, ಬೇಡಿಕೆ ಇಲ್ಲ ಎಂಬುದು ಕುಂಟು ನೆಪಮಾತ್ರ. ಅಷ್ಟೇನೂ ನೀರು ಬೇಡದೆ,ರೋಗ ರುಜಿನಗಳಿಲ್ಲದೇ ಗಟ್ಟಿಮುಟ್ಟಾಗಿ ಯಾವ ಮಣ್ಣಿನಲ್ಲಾದರೂ ಮೇಲೇಳಬಲ್ಲ ಈ ತೃಣ ಧಾನ್ಯಗಳಿಂದ ಆ ಕ್ರಿಮಿನಾಶಕ ಕಂಪನಿಗಳಿಗೆ, ರಸ ಗೊಬ್ಬರ ವ್ಯಾಪಾರಿಗಳಿಗೆ, ಕೃಷಿ ಯಂತ್ರ ತಯಾರಕರಿಗೆ ಹೆಚ್ಚೇನೂ ಫಾಯಿದೆ ಇರದು ತಾನೆ ? ಈ ನಾಟಿ ಬೀಜಗಳನ್ನೂ ರೈತ ಸಮುದಾಯವೇ ಸ್ವತಃ ಸಂರಕ್ಷಿಸಿ ಬಳಸುತ್ತಿರುವುದರಿಂದ ಬೀಜವ್ಯಾಪಾರಿಗಳಿಗೂ ಇಲ್ಲಿ ಅವಕಾಶವಿಲ್ಲದಂತಾಗಿದೆ. ಹಾಗಾಗಿ ಈ ತೃಣ ಧಾನ್ಯಗಳು ನಮ್ಮ ಮಾರುಕಟ್ಟೆ ಕೃಪಾಪೋಷಿತ ಹಸಿರುಕ್ರಾಂತಿ ವ್ಯಾಪ್ತಿಯ ಹೊರಗೇ ಉಳಿಯುವಂತಾಯ್ತು. ಸಾಲದ್ದಕ್ಕೆ ನಮ್ಮ ಪಡಿತರ ವ್ಯವಸ್ಥೆಯಡಿಯಲ್ಲಿ ಅಕ್ಕಿ, ಗೋಧಿ ಈ ಎರಡೇ ಧಾನ್ಯಗಳನ್ನು ಸೇರಿಸಿದ್ದು ಮಾತ್ರವಲ್ಲ ಎರಡು ರೂ.ಗೆ ಒಂದು ಕಿಲೊಗ್ರಾಂ ಅಕ್ಕಿಯಂತಹ ಜನಪ್ರಿಯ ಯೋಜನೆಗಳಿಗೆ ರಾಜಕೀಯ ಪಕ್ಷಗಳು ನಾಮುಂದು ತಾಮುಂದು ಎಂಬಂತೆ ಪೈಪೋಟಿ ನಡೆಸಿದವು. ಪರಿಣಾಮವಾಗಿ ಇಂದು ಬಡವರೂ ಕೂಡ ಈ ತೃಣಧಾನ್ಯಗಳತ್ತ ನೋಡದಂತಾಗಿರುವುದು ಈ ದೇಶದ ಅತಿ ದೊಡ್ಡ ದುರಂತಗಳಲ್ಲೊಂದಾಗಿದೆ. ಹಾಗಾಗಿ ಈ ತೃಣಧಾನ್ಯಗಳ ನೂರಾರು ನಾಟಿ ತಳಿಗಳು ಅಷ್ಟೇಕೆ ಆರ್ಕದಂತಹ ತೃಣ ಧಾನ್ಯವೇ ಇಂದು ನಮ್ಮಲ್ಲಿ ಹುಡುಕಿದರೂ ಸಿಗದಂತಾಗಿವೆ.

ಎಚ್ಚೆತ್ತುಗೊಳ್ಳುತ್ತಿರುವ ಸಮುದಾಯಗಳು : ಹೀಗೆ ಒಂದೆಡೆ ಸರ್ಕಾರ ಮತ್ತು ಮಾರುಕಟ್ಟೆಗಳೆರಡೂ ತೃಣಧಾನ್ಯಗಳನ್ನು ನಿರ್ಲಕ್ಷಿಸಿದ್ದರೆ ಇನ್ನೊಂದೆಡೆ ಈ ದೇವರ ಬೆಳೆಗಳು ತಳಮಟ್ಟದ ಸಮುದಾಯಗಳ ಕೈತಪ್ಪಿ ಹೋಗದಂತೆ ತಡೆಯುವ ಗಂಭೀರ ಪ್ರಯತ್ನ ಕೆಲ ಸ್ವಯಂ ಸೇವಾ ಸಂಸ್ಥೆಗಳಿಂದ ನಡೆಯುತ್ತಿದೆ. ಅಂತಹವುಗಳಲ್ಲಿ ಪಿ.ವಿ. ಸತೀಶ ನೇತೃತ್ವದ ಹೈದರಾಬಾದು ಮೂಲದ ಡೆಕ್ಕನ್ ಡೆವಲಪ್‌ಮೆಂಟ್ (Deccan Development Society-DDS)ಸಂಸ್ಥೆ ಮತ್ತು ಬೆಂಗಳೂರು ಮೂಲದ ವನಜಾ ರಾಂಪ್ರಸಾದ್ ನೇತೃತ್ವದ ಗ್ರೀನ್ (GREEN) ಫೌಂಡೇಶನ್ ಸಂಸ್ಥೆಗಳು ಅಂತ್ಯತ ಮುಖ್ಯವಾದವುಗಳು. ಕರ್ನಾಟಕ ತಮಿಳುನಾಡು ಗಡಿಯ ತಳಿ ಪ್ರದೇಶದಲ್ಲಿ ಸಕ್ರಿಯವಾಗಿರುವ ಗ್ರೀನ್ ಫೌಂಡೇಶನ್ ಸಂಸ್ಥೆ ರೈತರ ಮತ್ತು ಮಹಿಳೆಯರ ಸಹ ಭಾಗಿತ್ವದಲ್ಲಿ ಬೀಜಬ್ಯಾಂಕ್‌ಗಳ ಮೂಲಕ ನೂರಾರು ತೃಣಧಾನ್ಯದ ತಳಿಗಳನ್ನು ಸಂರಕ್ಷಿಸಿಕೊಂಡು ಬಂದಿರುತ್ತದೆ. ಬಿಳಿರಾಗಿ, ಅಯ್ಯನರಾಗಿ, ಕುಚ್ಚು ನವಣೆ, ರಂಗುಜೋಳ, ಮುಳ್ಳುಸಜ್ಜೆ, ಕರಿಸಾಮೆ, ಹೀಗೆ ಕಂಡು ಕೇಳರಿಯದ ತೃಣಧಾನ್ಯಗಳ ತಳಿ ಸಂರಕ್ಷಣೆ ಕಾರ್ಯವನ್ನು ಗ್ರೀನ್ ಫೌಂಡೇಶನ್ ಕೈಗೊಂಡಿರುತ್ತದೆ. ನವಣೆಯ ತಳಿ ವೈವಿಧ್ಯ, ಕೃಷಿ, ಸಂಸ್ಕರಣೆ, ಉಪಯೋಗಗಳ ಬಗ್ಗೆ Rediscovering Foxtail Millet ಎಂಬ ವಿಶೇಷ ಕೈಪಿಡಿಯನ್ನೇ ಪ್ರಕಟಿಸಲಾಗಿದೆ. *ಹೆಚ್ಚಿನ ವಿವರಗಳಿಗೆ www.greenconserve.com ನೋಡಿರಿ.*

ಆಂಧ್ರದ ಅತ್ಯಂತ ಹಿಂದುಳಿದ ಒಣ ಜಿಲ್ಲೆ ಮೇಡಕ್‌ನ್ನು ತನ್ನ ಕರ್ಮ ಭೂಮಿಯನ್ನಾಗಿರಿಕೊಂಡಿರುವ ಡೆಕ್ಕನ್ ಡೆವಲಪ್‌ಮೆಂಟ್ ಸಂಸ್ಥೆ ಕಳೆದ 20 ವರ್ಷಗಳಿಂದ ನೂರಾರು ಹಳ್ಳಿಗಳಲ್ಲಿ ಬಡ ದಲಿತ ಮಹಿಳೆಯರ ಸಂಘಗಳನ್ನು ಸ್ಥಾಪಿಸಿ ಈ ತೃಣಧಾನ್ಯಗಳನ್ನು ಸಂಕ್ಷಿಸಿರುವುದು ಮಾತ್ರವಲ್ಲ ಆ ಮೂಲಕ ಒಂದು ಪರ್ಯಾಯ ಆಹಾರ ಮತ್ತು ಪಡಿತರ ವ್ಯವಸ್ಥೆಯನ್ನೇ ಸೃಷ್ಟಿಸಿರುತ್ತದೆ. ಈ ಕಾರ್ಯವನ್ನು ಮತ್ತಷ್ಟು ವಿಸ್ತತಗೊಳಿಸಿ ರಾಷ್ಟ್ರವ್ಯಾಪಿ ಮಾಡಲು ರೈತರ ಸ್ವಯಂ ಸೇವಾ ಸಂಸ್ಥೆಗಳು, ಇನ್ನಿತರರನ್ನೊಳಗೊಂಡ "ತೃಣಧಾನ್ಯಗಳ ಭಾರತೀಯ ಜಾಲ" (Millet Network of India- MINI)ವ್ಯವಸ್ಥೆಯನ್ನೂ ಇತ್ತೀಚೆಗೆ ಹುಟ್ಟುಹಾಕಲಾಗಿದ್ದು ಅದರ ಮೂಲಕ ಸರ್ಕಾರದ ಮೇಲೆ ಸತತ ಒತ್ತಡ ಹೇರಲು ಪ್ರಯತ್ನಿಸಲಾಗಿದೆ. ಸಂಪೂರ್ಣ ತೃಣಧಾನ್ಯಗಳಿಂದ ತಯಾರಿಸಿದ ತಿಂಡಿ, ತಿನಿಸು, ಭಕ್ಷ ಭೋಜನಗಳ ಒಂದು 'ಕೆಫೆ ಎಥಿನಿಕ್' ಡಿ.ಡಿ.ಎಸ್.ಮೇಡಕ್ ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆಸುತ್ತಿದೆ. *ಹೆಚ್ಚಿನ ವಿವರಗಳಿಗೆ www.ddsindia.org ನೋಡಿರಿ.*

ಹೀಗೆ ಸುಸ್ಥಿರ ಕೃಷಿ ಮತ್ತು ಸಮೃದ್ಧ ಗ್ರಾಮೀಣ ಬದುಕಿಗೆ ಪೂರಕವಾದ ಒಣಬೇಸಾಯಕ್ಕೆ ಹೊಂದಿಕೊಳ್ಳುವ ಆಹಾರ ಭದ್ರತೆ, ಪೌಷ್ಟಿಕತೆ, ಮಹಿಳೆಯರಿಗೆ ಪ್ರಾಧಾನ್ಯತೆ ನೀಡುವ ಅಷ್ಟೇಕೆ ಅಧಿಕ ನೀರು, ರಾಸಾಯನಿಕ ಮತ್ತು ಇಂಧನವನ್ನು ಬೇಡದಿರುವುದರಿಂದ ಜಾಗತಿಕ ಪರಿಸರ ಸಮಸ್ಯೆಗಳನ್ನೂ ಕಡಿಮೆ ಮಾಡುವ ಎಲ್ಲಾ ಸಾಮರ್ಥ್ಯಗಳನ್ನು ಮೈಗೂಡಿಸಿಕೊಂಡಿರುವ ಈ ತೃಣ ಧಾನ್ಯಗಳು ಕೃಷಿಯನ್ನು ಗಟ್ಟಿಮಾಡುವತ್ತ ರೈತ ಸಮುದಾಯಗಳು ಗಂಭೀರ ವಾಗಿ ಚಿಂತಿಸುತ್ತಿವೆ. ಈ ಹಿನ್ನೆಲೆಯಲ್ಲಿ **'ತೃಣ ಧಾನ್ಯಗಳ ಭಾರತೀಯ ಜಾಲ'** (MINI) ಕಳೆದ ಜೂನ್ 5-6 ರಂದು ಹೈದರಾಬಾದಿನಲ್ಲಿ ಒಂದು ರಾಷ್ಟ್ರೀಯ ಸಮ್ಮೇಳನ ನಡೆಸಿ ಈ ಕೆಳಗಿನ ಘೋಷಣೆಗಳನ್ನು ಹೊರಡಿಸಿರುತ್ತದೆ.

1) ದೇಶದ ವಿವಿಧ ಪ್ರದೇಶಗಳ ಕೃಷಿ ಮತ್ತು ಆಹಾರ ವ್ಯವಸ್ಥೆಗಳಲ್ಲಿ ಮಹತ್ವದ ಪಾತ್ರವಹಿಸುತ್ತಿರುವ ಆಯಾ ತೃಣ ಧಾನ್ಯಗಳನ್ನು, ಉದಾ: ರಾಜಾಸ್ಥಾನದ ಮಳೆ ಆಶ್ರಯ ಪ್ರದೇಶದಲ್ಲಿ ಸಜ್ಜೆ(Pearl Millet), ಮಹಾರಾಷ್ಟ್ರದ ಮರಾಠವಾಡ, ಆಂಧ್ರದ ತೆಲಂಗಾಣ ಮತ್ತು ಉತ್ತರ ಕರ್ನಾಟಕದ ಜೋಳ (Sorghum), ದಕ್ಷಿಣ ಆಂಧ್ರ, ಹಳೇ ಮೈಸೂರು, ತಮಿಳ್ನಾಡು ಮತ್ತು ಒರಿಸ್ಸಾದಲ್ಲಿ ರಾಗಿ (Finger Millet), ಉತ್ತರಖಾಂಡ, ಮತ್ತಿತರ ಆದಿವಾಸಿ ಪ್ರದೇಶಗಳಲ್ಲಿ ನವಣೆ (Foxtail Millet), ಸಾಮೆ(Little Millet), ಆರ್ಕ (Kodo Millet), ಬರುಗು (Proso Millet), ಇವುಗಳನ್ನು ಸರ್ಕಾರ ಬೆಂಬಲಬೆಲೆ ನೀಡಿ ಖರೀದಿಸಿ ವಿಕೇಂದ್ರಿತ ಪಡಿತರ ವ್ಯವಸ್ಥೆ ಮೂಲಕ ವಿತರಣೆ ಮಾಡತಕ್ಕದ್ದು.
2) ಸರ್ಕಾರದ ಅನ್ನದಾನ ಕಾರ್ಯಕ್ರಮಗಳಾದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ, ಬಡಮಕ್ಕಳ ಉಚಿತ ಹಾಸ್ಟೆಲ್ ಮತ್ತಿತರ ಕಲ್ಯಾಣ ಕಾರ್ಯಕ್ರಮ ಗಳಲ್ಲಿ ತೃಣಧಾನ್ಯಗಳ ಆಹಾರವನ್ನೇ ನೀಡುವುದು.
3) ಈ ತೃಣಧಾನ್ಯಗಳ ಸುಸ್ಥಿರ ಕೃಷಿಗೆ ಪೂರಕವಾದ ಪಶುಪಾಲನೆ ಅದೂ ಸ್ಥಳೀಯ ಪರಿಸರಕ್ಕೆ ಹೊಂದಿಕೊಳ್ಳುವ ನಾಟಿತಳಿಗಳ ಪಶುಪಾಲನೆ ಗಟ್ಟಿ ಮಾಡುವುದೂ ಅಷ್ಟೇ ಅಗತ್ಯವಾಗಿದೆ.
4) ತೃಣಧಾನ್ಯಗಳ ಉತ್ಪಾದಕತೆ ಹೆಚ್ಚಿಸುವುದು ಇಂದಿನ ಅತ್ಯಂತ ತುರ್ತು ಕ್ರಮಗಳಲ್ಲೊಂದು. ಈ ಬೆಳೆಗಳು ಮಳೆ ಆಶ್ರಯದ ಒಣಭೂಮಿಗೆ

ಸೀಮಿತವಾಗಿರುವುದರಿಂದ ಆ ಪ್ರದೇಶದಲ್ಲಿ ಮಣ್ಣು ಮತ್ತು ನೀರು ಸಂರಕ್ಷಣೆ, ಒಣಬೇಸಾಯ ತಂತ್ರಜ್ಞಾನ ಮಿಗಿಲಾಗಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮ ಕೈಗೆತ್ತಿಕೊಳ್ಳುವುದು ಅಷ್ಟೇ ತುರ್ತು ಕ್ರಮವಾಗಿದೆ. ಕೇಂದ್ರ ಸರ್ಕಾರದ ಉದ್ಯೋಗ ಖಾತರಿ ಕಾರ್ಯಕ್ರಮವನ್ನು ಈ ನಿಟ್ಟಿನಲ್ಲಿ ಬಳಸುವುದು ಅತ್ಯಂತ ಸೂಕ್ತವಾಗಿದೆ.

5) ತೃಣಧಾನ್ಯಗಳ ಕೃಷಿ ಮೂಲತಃ ವೈವಿಧ್ಯಮಯ ಕೃಷಿ. ಹಾಗಾಗಿ, ಸಂಶೋಧನೆ ಮತ್ತು ಅಭಿವೃದ್ಧಿ ವಿಚಾರದಲ್ಲಿ ಏಕಬೆಳೆ ಪದ್ಧತಿಯಂತಹ ಕ್ರಮವನ್ನು ಕೈಗೆತ್ತಿಗೊಳ್ಳದೇ ತೃಣಧಾನ್ಯಗಳ ಸುತ್ತ ದಟ್ಟವಾಗಿರುವ ಜೀವ ವೈವಿಧ್ಯವನ್ನು ಗಟ್ಟಿಮಾಡಬೇಕಾಗಿದೆ.

6) ತೃಣಧಾನ್ಯಗಳ ತಳಿ ವೈವಿಧ್ಯವನ್ನು ಸಂರಕ್ಷಿಸುವುದರ ಜೊತೆಗೆ ರೈತ ಸಹಭಾಗಿತ್ವದಲ್ಲಿ ಉತ್ಪಾದಕತೆ ಮತ್ತು ಪೌಷ್ಠಿಕಾಂಶ ಅಧಿಕಗೊಳಿಸುವಂತಹ ತಳಿಗಳ ಅಭಿವೃದ್ಧಿ ಕಾರ್ಯವನ್ನೂ ಕೈಗೊಳ್ಳಬೇಕಾಗಿದೆ.

7) ಅಧಿಕ ನೀರು ಬೇಡದ, ಯಾವುದೇ ರೀತಿಯ ರಾಸಾಯನಿಕಗಳನ್ನು, ಇಂಧನವನ್ನೂ ಕೇಳದ ಈ ತೃಣಧಾನ್ಯಗಳ **"ಸಾಮಾಜಿಕ ಪರಿಸರ ಕಾಣಿಕೆ"** ಅಪಾರವಾದದ್ದು. ಈ ಕಾಣಿಕೆಯನ್ನು ಅರಿತು, ಅಳೆದು ತೃಣಧಾನ್ಯ ಬೆಳೆಯುವ ರೈತ ಸಮುದಾಯಕ್ಕೆ ಮರುಪಾವತಿಸುವ ಒಂದು "ಸಾಂಸ್ಥಿಕ ವ್ಯವಸ್ಥೆ" ಶೀಘ್ರ ರಚನೆಯಾಗಬೇಕಾಗಿದೆ.

8) ಸಮುದಾಯಗಳ ಹಿಡಿತದಲ್ಲಿ ಸ್ಥಳೀಯವಾಗಿ ಆಹಾರ ಭದ್ರತೆಯನ್ನು ಗಟ್ಟಿಮಾಡುವುದರ ಜೊತೆಗೆ ಈ ತೃಣ ಧಾನ್ಯಗಳನ್ನು ಆರೋಗ್ಯದ ಬಗ್ಗೆ ಅತಿಕಾಳಜಿ ಹೊಂದಿರುವ ನಗರಗಳ ಗ್ರಾಹಕ ಮಾರುಕಟ್ಟೆಗೂ ತಲುಪಿಸುವುದು ಅಗತ್ಯವಾಗಿದೆ. ಇದಕ್ಕಾಗಿ ತೃಣಧಾನ್ಯಗಳ ಸೂಕ್ತ ಸಂಸ್ಕರಣೆ, ಮೌಲ್ಯವರ್ಧನೆ ಕ್ರಮಗಳು ಅಗತ್ಯವಾಗಿವೆ.

9) ತೃಣಧಾನ್ಯಗಳ ಮಾರಾಟ ಸಂಪೂರ್ಣವಾಗಿ ಖಾಸಗಿ ವಾಣಿಜ್ಯ ಸಂಸ್ಥೆಗಳ ಕೈವಶವಾಗುವುದನ್ನು ತಪ್ಪಿಸಲು ಪ್ರಾರಂಭದಲ್ಲಿ ರೈತ ಸಮುದಾಯಗಳೊಡನೆ ಕೆಲಸ ಮಾಡುತ್ತಿರುವ ಸ್ವಯಂ ಸೇವಾಸಂಸ್ಥೆಗಳ ಒಂದು ಮಾರಾಟ ಜಾಲ ನಿರ್ಮಿಸುವುದು ಅತ್ಯಗತ್ಯವಾಗಿರುತ್ತದೆ. ಅಂತಿಮವಾಗಿ ಇದು ಸಂಪೂರ್ಣವಾಗಿ ಒಂದು **'ಸ್ವಾಯತ್ತ ರೈತ ಮಾರುಕಟ್ಟೆಗಳ ಒಕ್ಕೂಟವಾಗಿ'** ರೂಪುಗೊಳ್ಳಬೇಕಾಗಿದೆ.

10) ಇವೆಲ್ಲಕ್ಕಿಂತ ಮುಖ್ಯವಾಗಿ ಈ ತೃಣಧಾನ್ಯಗಳಲ್ಲಿನ ಪೌಷ್ಠಿಕತೆ, ಆರೋಗ್ಯದಾಯಕ ಮತ್ತು ಔಷಧೀಯ ಗುಣಗಳ ಬಗ್ಗೆ ಗ್ರಾಹಕರಲ್ಲಿ ಅರಿವು ಮತ್ತು ಜಾಗೃತಿ ಮಾಡಿಸಬೇಕಾಗಿದೆ. ಹಾಗೇ, ಇದರ ಪರಿಸರ ಮೌಲ್ಯಗಳ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ತಕ್ಷಣ ಬೋಧನಾ ಮತ್ತು ಪ್ರಚಾರ ಪರಿಕರಗಳನ್ನು ತಯಾರಿಸಬೇಕು. ಹಾಗೇ ಇವುಗಳ ಸುಸ್ಥಿರ ಕೃಷಿ ಪದ್ಧತಿಗಳು, ಆಹಾರ ವಿಧಗಳು ಮತ್ತು ಅಡಿಗೆ ಕ್ರಮಗಳನ್ನು ಎಲ್ಲೆಲ್ಲಿ ಅನುಸರಿಸಲಾಗುತ್ತಿದೆಯೋ ಅವೆಲ್ಲವುಗಳನ್ನು ವ್ಯವಸ್ಥಿತ ರೀತಿಯಲ್ಲಿ ದಾಖಲಿಸಿ, ರೈತರು ಮತ್ತು ಗ್ರಾಹಕ ವರ್ಗದ ಕೈಗೆಟುಕುವಂತೆ ಮಾಡಬೇಕು. ಈ ಎಲ್ಲ ಕ್ರಮಗಳಿಂದ ತೃಣಧಾನ್ಯಗಳಲ್ಲಿ ಇತಿಮಿತಿ ಇಲ್ಲದ ತುಷ್ಟಿಗುಣ (utility) ಗಳು ಎಲ್ಲರ ಕೈಗೆಟುಕುವಂತಾಗಿ, ಅವುಗಳ ಕೃಷಿಯಲ್ಲಿ ತೊಡಗುವ ರೈತ ಸಮುದಾಯಕ್ಕೆ ಭರವಸೆ ಮತ್ತು ಧೈರ್ಯ ಸಿಗುವಂತಾಗುತ್ತದೆ.

ಡಾ|| ಪ್ರಕಾಶ್ ಕಮ್ಮರಡಿ

ಮುಖಪುಟ ಮತ್ತು ಚಿತ್ರಗಳು : ಕೃಪೆ 'Green Foundation (ಬೆಂಗಳೂರು) ಮತ್ತು *Deccan Development Society*' (ಹೈದರಾಬಾದ್)

ಅಪಾರ ಸಾಧ್ಯತೆಗಳ ಪುಷ್ಪಕೃಷಿ - ಚೆಂಡು ಹೂ ಬೇಸಾಯ

ಹಬ್ಬ ಹರಿದಿನಗಳಲ್ಲಿ ಎಲ್ಲಿ ನೋಡಿದರಲ್ಲಿ ಕಣ್ಣು ಕುಕ್ಕುವ ಕೆಂಪು ಕೆಂಪನೆಯ ಮುದ್ದು ಮುದ್ದಾದ ಹೂವು-ಚೆಂಡು ಹೂವು. ಇದು ಬರಿದೇ ಪುಷ್ಪವಾಗಿ ಅಲ್ಲ, ವೃದ್ಧರ ಕಣ್ಣಿನ ಆರೈಕೆ, ಕೋಳಿ ಆಹಾರ, ನೈಸರ್ಗಿಕ ಬಣ್ಣ, ಜೈವಿಕ ಹತೋಟಿವರೆಗೆ ಹಲವಾರು ಉಪಯೋಗ ಪಡೆದುಕೊಂಡಿದೆ. ಚೆಂಡು ಹೂವಿನ ಈ ಎಲ್ಲಾ ವೈವಿಧ್ಯ ಉಪಯೋಗಗಳನ್ನು ಸೂಕ್ತ ರೀತಿಯಲ್ಲಿ ಬಳಸಿದ್ದೇ ಆದರೆ ಇದರ ಬೇಸಾಯದ ವಾಣಿಜ್ಯ ಮೌಲ್ಯ ಎತ್ತರಕ್ಕೇರುವ ಸಾಧ್ಯತೆಯಿರುತ್ತದೆ.

ಚೆಂಡು ಹೂವನ್ನು ಮಿಶ್ರ ಬೆಳೆಯಾಗಿ ಇತರ ಬೆಳೆಗಳ ಜೊತೆಗೆ ಬೆಳೆಸಿದರೆ, ಆ ಬೆಳೆಗಳಿಗೆ ಬೀಳುವ ರೋಗ ರುಜಿನಗಳು ಗಮನಾರ್ಹವಾಗಿ ಕಡಿಮೆಯಾಗುವುದನ್ನು ನಮ್ಮ ರೈತರು ಅರಿತಿರುವರು. ತಮಿಳುನಾಡಿನ ರೈತರು ಚೆಂಡು ಹೂವನ್ನು ಬಾಳೆ ತೋಟದ ಮಧ್ಯೆ ಅಲ್ಲಲ್ಲಿ ಬೆಳೆಸುತ್ತಾರಂತೆ. ಇದರಿಂದ ಬಾಳೆ ಸಸಿಗಳಿಗೆ ಮಣ್ಣಿನ ಮೂಲದ ಪೀಡೆಗಳ (*Nematode*) ಬಾಧೆ ತಟ್ಟುವುದಿಲ್ಲವಂತೆ. ಇದೇ ರೀತಿ ಅರಿಶಿನ ಬೆಳೆಯನ್ನು ಕೂಡ ರಕ್ಷಿಸಬಹುದಂತೆ. ಹಾಗೇ ನಮ್ಮ ರಾಯಚೂರು ಪ್ರಾಂತ್ಯದ ರೈತರು ಟೊಮೆಟೊ, ತೊಗರಿ ಬೆಳೆಗಳಿಗೆ ಬೀಳುವ ಕಾಯಿಕೊರಕ ಪೀಡೆಯನ್ನು ಚೆಂಡು ಹೂವಿನ ಸಹಾಯದಿಂದ ರಕ್ಷಿಸುತ್ತಾರಂತೆ.

ಚೆಂಡು ಹೂವಿನಲ್ಲಿರುವ ಲ್ಯೂಟಿನ್ (*Lutein*) ಎಂಬ ರಾಸಾಯನಿಕ ವೃದ್ಧರ ಕಣ್ಣಿನ ಚಿಕಿತ್ಸೆಗೆ ಒಂದು ಉತ್ತಮ ಔಷಧಿಯಾಗಿದೆ. ಇದಕ್ಕೆ ಅಮೇರಿಕ, ಜಪಾನಿನಂತಹ ಮುಂದುವರಿದ ರಾಷ್ಟ್ರಗಳಲ್ಲಿ ಅಪಾರ ಬೇಡಿಕೆಯಿದೆ. ಹಾಗಾಗಿ ಕೆಲ ಖಾಸಗಿ ಕಂಪನಿಗಳು ನಮ್ಮ ಮೈಸೂರು, ತಮಿಳುನಾಡಿನ ಕೆಲವೆಡೆ ರೈತರೊಡನೆ 'ಒಪ್ಪಂದ ಕೃಷಿ' ಮೂಲಕ ಬೆಳೆಸಿ, ಲ್ಯೂಟಿನ್ ಹೊರತೆಗೆದು ರಫ್ತು ಮಾಡುತ್ತಲಿವೆ. ಇದೇ ರೀತಿ ಈ ಹೂವಿನ ಕೆಂಬಣ್ಣ ಒಂದು ಅತ್ಯುತ್ತಮ ನೈಸರ್ಗಿಕ ಬಣ್ಣವಾಗಿದ್ದು, ಕೋಳಿ ಮತ್ತು ಮನುಷ್ಯರ ಆಹಾರದಲ್ಲಿ ಮಿಶ್ರಣಕ್ಕೆ ಉಪಯೋಗವಾಗುತ್ತಿದೆ. ಇದನ್ನು ಕೋಳಿ ಆಹಾರದಲ್ಲಿ ಮಿಶ್ರಣ ಮಾಡಿದರೆ, ಮೊಟ್ಟೆಗಳ ಒಳಗಿನ ಹಳದಿಯ ಲೋಳೆ ಮತ್ತಷ್ಟು ಕಿತ್ತಳೆ ಬಣ್ಣಕ್ಕೆ ತಿರುಗುವಂತಾಗುತ್ತದೆ. ಹಾಗಾಗಿ ಮೆಕ್ಸಿಕೊ ಮುಂತಾದ ರಾಷ್ಟ್ರಗಳಲ್ಲಿ ಈ ಚೆಂಡು ಹೂವಿನ ಬಣ್ಣಕ್ಕೆ ಅಪಾರ ಬೇಡಿಕೆಯಿದೆ. ಇನ್ನು ಶುದ್ಧ ಪುಷ್ಪವಾಗಿ ಚೆಂಡು ಹೂವಿಗೆ ದೇಶ ವಿದೇಶಗಳಲ್ಲಿ ಬೇಡಿಕೆ ಇದ್ದೇ ಇದೆ. ಚೆಂಡು ಹೂವನ್ನು ತಟಸ್ಥ ರಸಸಾರವಿದ್ದು, ಚೆನ್ನಾಗಿ ನೀರು ಬಸಿದು ಹೋಗುವಂತಹ ಮಣ್ಣಿನಲ್ಲಿ ವರ್ಷವಿಡೀ ಬೆಳೆಯಬಹುದು. ಮಳೆಗಾಲದಲ್ಲಿ ಅತ್ಯುತ್ತಮ ಇಳುವರಿ ಸಿಗುತ್ತದೆ. ಸರಾಸರಿ ಎಕರೆಗೆ 30 – 40 ಕ್ವಿಂಟಾಲ್ ಇಳುವರಿ ಬರಬಹುದು. ತೀವ್ರಗತಿಯಲ್ಲಿ ಮೇಲೇಳುತ್ತಿರುವ ಚೆಂಡು ಹೂವಿನ ರಫ್ತು ಮಾರುಕಟ್ಟೆ ಜಾಗತಿಕ ಮಟ್ಟದಲ್ಲಿ ಸದ್ಯಕ್ಕೆ ರೂ. 500 ಕೋಟಿ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಭಾರತದ ಪಾಲು ಶೇ. 25 ರಷ್ಟು.

ಹೀಗೆ ಅಪಾರ ಸಾಧ್ಯತೆಯಿರುವ ಚೆಂಡು ಹೂ ಕೃಷಿಯತ್ತ ನಮ್ಮ ರೈತರು ಗಮನ ಹರಿಸುವಂತೆ ಮಾಡುವುದು ಈಗ ಅಗತ್ಯವಾಗಿದೆ.

ನಿರಂತರ ಬೆಳೆಯಾಗಿ ಬಾಳೆ

ನಮ್ಮ ಪೂರ್ವಜರು ಏತ, ಕಪಿಲೆ ವಿಧಾನಗಳಿಂದ ನೀರು ಪೂರೈಕೆ ಮಾಡುತ್ತಾ ಅಡಿಕೆ, ತೆಂಗು, ಬಾಳೆ, ವೀಳ್ಯದೆಲೆ ಬೆಳೆದು ಅಧಿಕ ಇಳುವರಿ ಪಡೆಯುತ್ತಿದ್ದರು.15-20 ದಿನಗಳಿಗೊಮ್ಮೆ ನೀರು ಪೂರೈಕೆ ಅವರ ವಿಧಾನವಾಗಿದ್ದು, ಮಣ್ಣಿನಲ್ಲಿ ನಿರಂತರವಾಗಿ ಜೈವಿಕ ಕ್ರಿಯೆ ನಡೆಯಲು ಉಳುಮೆ ತೇವಾಂಶ ಇದ್ದರೆ ಸಾಕೆಂದು ಅವರ ಬೆಳೆ ವಿಧಾನದಿಂದ ತಿಳಿದು ಬರುತ್ತಿತ್ತು. ಇಂದಿನ ಕೃಷಿ ಹೊಂಡಗಳ ರೀತಿ ಅಂದಿನ ಹಾಳು ಬಾವಿಗಳು ಸಸ್ಯತ್ಯಾಜ್ಯಗಳಿಂದ ತುಂಬುತ್ತಿದ್ದವು. ಅಲ್ಲಿ ಈ ತ್ಯಾಜ್ಯಗಳು ಕೊಳೆತು ಕಷಾಯ ರೂಪದಲ್ಲಿ ನೀರಿನೊಂದಿಗೆ ಭೂಮಿಗೆ ಸೇರುತ್ತಿದ್ದವು. ಇದು ಕಷಾಯದ ರೀತಿಯಲ್ಲಿ ಬೆಳೆಗಳಿಗೆ ಉತ್ತಮ ಪೋಷಣೆ ನೀಡುತ್ತಿತ್ತು. ಈ ವಿಧಾನವನ್ನು ಮಾರ್ಪಡಿಸಿ, ಬಾಳೆಯನ್ನು ಕಡಿಮೆ ನೀರು, ಶ್ರಮ ಮತ್ತು ಖರ್ಚಿನಲ್ಲಿ ಬೆಳೆಯುವ ಹೊಸ ವಿಧಾನ ಒಂದನ್ನು ನಮ್ಮ ಸಾವಯವ ಕೃಷಿಕ ಬಸವರಾಜು ಸಂತೇಶಿವರರು ಕಂಡು ಹಿಡಿದಿರುವರು.

ನಾಟಿ ಮಾಡುವಾಗ ಬಾಳೆ ಗೆಡ್ಡೆಯನ್ನು ಗುಂಡಿಯಲ್ಲಿ ನೇರವಾಗಿ ನಿಲ್ಲಿಸದೇ ಮಲಗಿಸಿದರೆ, ಗೆಡ್ಡೆಯಿಂದ 3-4 ಕಣ್ಣುಗಳು ಚಿಗುರಿ ಬರುತ್ತವೆ. ಅದರಲ್ಲಿ ಉತ್ತಮವಾದ ಚಿಗುರನ್ನು ಬೆಳೆಯಲು ಬಿಟ್ಟು ಉಳಿದಿದ್ದನ್ನು ತೆಗೆದರೆ 6 ತಿಂಗಳವರೆಗೂ ಕಂದು ಬರುವುದಿಲ್ಲ. ಬೆಳೆಯಲು ಬಿಟ್ಟ ಕಂದುಮರಿ ಆರೋಗ್ಯ ದಿಂದ ಸದೃಢವಾಗಿ ಬೆಳೆಯುತ್ತದೆ. ಈ ಮರಿಗೆ ಪ್ರತಿ ತಿಂಗಳಿಗೊಮ್ಮೆ "ಕಷಾಯ" ಪೂರೈಕೆ ಮಾಡಿದರೆ ಇನ್ನೂ ಗುಣಮಟ್ಟದ ಬೆಳವಣಿಗೆ ಕಾಣಬಹುದು.

ಬಾಳೆಯ ಕಷಾಯ ತಯಾರಿಸುವ ಕ್ರಮ ಈ ಕೆಳಕಂಡಂತಿದೆ. 20 ಕೆ.ಜಿ. ಸಗಣಿ, 20 ಲೀಟರ್ ಗಂಜಲ, ಅರ್ಧ ಕೆ.ಜಿ. ಸುಣ್ಣ, ಒಂದು ಕೆ.ಜಿ. ಪುಡಿ ಬೆಲ್ಲ ಮಿಶ್ರ ಮಾಡಿ 10 ದಿನಗಳವರೆಗೂ ಮಾಗಲು ಬಿಟ್ಟು 11 ನೇ ದಿನ ಅದಕ್ಕೆ 90 ಲೀಟರ್ ನೀರು ಪೂರೈಕೆ ಮಾಡಿ ಚೆನ್ನಾಗಿ ತಿರುವಬೇಕು. ಪ್ರತಿ ಗಿಡದ ಬುಡಕ್ಕೆ ಒಂದು ಲೀಟರ್‌ನಂತೆ ಈ ಕಷಾಯವನ್ನು ತಿಂಗಳಿಗೊಮ್ಮೆ ಪೂರೈಕೆ ಮಾಡಿದರೆ ಬಾಳೆಮರಿ ಆರೋಗ್ಯದಿಂದ ಬೆಳೆದು ಬರುತ್ತದೆ. ಗಿಡದಲ್ಲಿ 52 ನೇ ಎಲೆಯ ನಂತರ ಹೂ ಬರುತ್ತದೆ.ಬುಡಕ್ಕೆ ಅಂಟಿಕೊಂಡಿರುವಂತೆ ಒಂದು ಮರಿ ಬೆಳೆಯಲು ಬಿಡಬೇಕು. 13ನೇ ತಿಂಗಳಿಗೆ ಗೊನೆ ಕಟಾವಿಗೆ ಬರುತ್ತದೆ. ಗೊನೆಯನ್ನು ಮಾತ್ರ ಕತ್ತರಿಸಿ ಬಾಳೆ ಮರವನ್ನು ಹಾಗೇ ಬಿಡಬೇಕು. ಬಿಟ್ಟ ಮರದಿಂದ ಲವಣಾಂಶಗಳು, ಬೆಳೆಯಲು ಬಿಟ್ಟ ಮರಿಗೆ ಪೂರೈಕೆಯಾಗಿ ಮೊದಲಿನ ಬಾಳೆ ಮರಕ್ಕಿಂತಲೂ ಈ ಮರಿ ಹೆಚ್ಚು ಗಾತ್ರವಾಗಿ ಆರೋಗ್ಯವಾಗಿ ಬೆಳೆದು ಬರುತ್ತದೆ. ಎರಡನೇ ಬೆಳೆ 6 ತಿಂಗಳಲ್ಲಿ ಕಟಾವಿಗೆ ಸಿದ್ಧವಾಗುತ್ತದೆ. ಮೊದಲಿನ ಇಳುವರಿಗಿಂತ ಹೆಚ್ಚಿನದಾಗಿರುತ್ತದೆ. ಈ ರೀತಿ 7-8 ನಿರಂತರ ಬಾಳೆ ಬೆಳೆ ಪಡೆಯಲು ಸಾಧ್ಯ ಎಂಬುದು ಸಂತೇಶಿವರರ ಅಭಿಪ್ರಾಯ.

ಈ ರೀತಿ ಬೆಳೆಯುವುದರಿಂದ ಪದೇ ಪದೇ ನಾಟಿ ಮಾಡುವ ಅಗತ್ಯವಿರುವುದಿಲ್ಲ. ನೀರಿನ ಪೂರೈಕೆಯಲ್ಲಿ ಅಪಾರ ಉಳಿತಾಯ, ಯಾವುದೇ ರೀತಿಯ ಅಧಿಕ ಖರ್ಚಿಲ್ಲ. ಮಣ್ಣಿನ ಆರೋಗ್ಯ ಉತ್ತಮವಾಗಿರುತ್ತದೆ. ಗೆಡ್ಡೆ ರೋಗ, ಪನಾಮರೋಗ, ಕಟ್ಟೆರೋಗ ಇತ್ಯಾದಿ ಯಾವುದೇ ರೋಗಕ್ಕೆ ಬಾಳೆ ಗುರಿಯಾಗುವುದಿಲ್ಲ ಮತ್ತು ಉತ್ಪಾದನೆ ಗುಣಮಟ್ಟದ್ದಾಗಿರುತ್ತದೆ. ಈ ಕ್ರಮದಿಂದ "ಬಡವನಿಗೆ ಬಾಳೆ" ಎಂಬ ನಾಣ್ಣುಡಿ ನಿಜವಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ : ಬಿ. ಬಸವರಾಜು, ಸಂತೇಶಿವರ -573131, ಹಾಸನ, ಫೋನ್: 9611608472.

ಇಲಿ ಹಿಡಿಯುವಾಗ ಒಂದು ಸೂಚನೆ

ಮನೆಯಲ್ಲಿ ಇಲಿ ಕಾಟ ಜಾಸ್ತಿಯಾದಾಗ ನಮಗೆ ಮೊದಲು ನೆನಪು ಬರುವುದು ಇಲಿ ಬೋನು. ಬೋನು ಇಟ್ಟರೂ ಎರಡು ಅಥವಾ ಮೂರು ಬೀಳಬಹುದು. ನಂತರ ಬೋನಿನಲ್ಲಿ ಬೀಳುವುದು ಕಮ್ಮಿಯೇ. ಕಾರಣ ಬೋನಿನಲ್ಲಿ ಬಿದ್ದಂತಹ ಇಲಿಯು ಒಂದು ತರಹದ ಹಾರ್ಮೋನನ್ನು ಹೊರ ಚೆಲ್ಲುತ್ತದೆಯಂತೆ. ಈ ಹಾರ್ಮೋನಿನಿಂದ ಇತರ ಇಲಿಗಳಿಗೆ ಅಪಾಯದ ಸೂಚನೆಯ ಅರಿವಾಗುತ್ತದೆ. ಇದರಿಂದ ಕರಿದ ತಿಂಡಿಗಳೇನೇ ಇಟ್ಟರೂ ಅತ್ತ ಕಡೆ ಅವು ಸುಳಿಯುವುದೇ ಇಲ್ಲ. ಇದಕ್ಕೆ ಪರಿಹಾರವಾಗಿ ಒಂದು ಚಮಚ ಸುಣ್ಣ, ಅರ್ಧ ಚಮಚ ಅರಿಸಿನ ಪುಡಿಯನ್ನು ಒಂದು ಬಕೆಟ್ ನೀರಿನಲ್ಲಿ ಕದಡಿ. ಆಗ ನೀರು ಕೆಂಪಾಗುತ್ತದೆ. ಈ ನೀರನ್ನು ಉಪಯೋಗಿಸಿಕೊಂಡು ಖಾಲಿ ಬೋನನ್ನು ಚೆನ್ನಾಗಿ ತೊಳೆಯಬೇಕು. ಇದರಿಂದ ಹಾರ್ಮೋನಿನ ವಾಸನೆಯು ಕಾಣೆಯಾಗುತ್ತದೆ. ಈ ರೀತಿ ಪ್ರತಿ ಬಾರಿ ಇಲಿ ಬಿದ್ದ ಬೋನನ್ನು ಇಂತಹ ನೀರಿನಿಂದ ಚೆನ್ನಾಗಿ ತೊಳೆಯಬೇಕು. ಹೆಚ್ಚಾಗಿ ಮಳೆಗಾಲದಲ್ಲಿ ಹೆಗ್ಗಣ, ಇಲಿಗಳು ನಾವಿಡುವ ಆಮಿಷಗಳ ಆಕರ್ಷಣೆಗೊಳಗಾಗುವುದು ಹೆಚ್ಚು. ಹಾಗೇ, ಇಲಿಗಳು ಒಂದೇ ರೀತಿಯ ಆಹಾರವನ್ನು ಇಷ್ಟಪಡುವುದಿಲ್ಲ ಮತ್ತು ವರ್ಷದ ಕೆಲವು ವೇಳೆ ಇವು ಯಾವುದೇ ಆಹಾರವನ್ನು ತಿನ್ನುವುದಿಲ್ಲ ಎನ್ನುವ ಅಂಶವನ್ನು ಗಮನಿಸಬೇಕು.

ಮೂಲ: ಉದಯವಾಣಿ, ಸೋಮವಾರ, 21 ಜುಲೈ 2008.

ಬಂಜೆ ಗಿಡಗಳಿಗೆ ರಂಧ್ರ ಮತ್ತು ಉಂಗುರ ಚಿಕಿತ್ಸೆ

ಕೆಲ ಅಡಿಕೆ, ನಿಂಬೆ ಮುಂತಾದ ಗಿಡಗಳಲ್ಲಿ ದಶಕ ಕಳೆದರೂ ಫಸಲು ಬಿಟ್ಟಿರುವುದಿಲ್ಲ, ಇಂತಹ ಗಿಡಗಳಿಗೆ ರೈತರೇ ಹಲವಾರು ಚಿಕಿತ್ಸೆಗಳನ್ನು ಮಾಡಿ ಗೆದ್ದಿದ್ದಾರೆ. ಇಂತಹವರಲ್ಲಿ ದಕ್ಷಿಣ ಕನ್ನಡದ ಜಯರಾಮ ಶೆಟ್ಟರು ಒಬ್ಬರಾಗಿದ್ದಾರೆ. ಇವರು ತಮ್ಮ ಹಳೆಯ ಗದ್ದೆಯಲ್ಲಿ ಹೊಸ ಅಡಿಕೆ ತೋಟವನ್ನು ಮಾಡಿ ಅದರಲ್ಲಿ ತಾವೇ ಮೊಳಕೆಯೊಡೆಸಿದ್ದ ಸಸಿಗಳಲ್ಲಿ ಉತ್ತಮವಾದವುಗಳನ್ನು ಆರಿಸಿ ನೆಟ್ಟಿದ್ದರು. ಐದಾರು ವರ್ಷಗಳಲ್ಲಿ ಹೆಚ್ಚಿನ ಮರಗಳು ಫಸಲು ನೀಡಲಾರಂಭಿಸಿದರೂ, ಕೆಲವು ಮರಗಳಲ್ಲಿ ದಶಕ ಕಳೆದರೂ ಫಸಲೇ ಇಲ್ಲ, ಯಾವುದೇ ಸಸ್ಯವು ತಾನಿನ್ನು ಸಾಯುತ್ತೇನೆ ಎಂದು ಅನಿಸಿದಾಗ ಅದು ಅಧಿಕ ಫಸಲು ನೀಡಲಾರಂಭಿಸುತ್ತದೆ. ತನ್ನ ಸಂತತಿಯನ್ನು ಉಳಿಸಿ ಬೆಳೆಸುವುದೇ ಇದರ ಹಿಂದಿನ ಉದ್ದೇಶ. ಇದನ್ನೇ ಆಧಾರವಾಗಿಟ್ಟುಕೊಂಡು ಶೆಟ್ಟರು ಯಾವುದೇ ಕೃಷಿ ತಜ್ಞರಲ್ಲಿ ಹೋಗಲಿಲ್ಲ, ಬದಲಿಗೆ ಅವರು ಬಡಗಿಯೊಬ್ಬರ ಸಹಾಯದಿಂದ ಬರಡು ಮರಗಳ ಕಾಂಡಗಳಲ್ಲಿ ನೆಲದಿಂದ ಸುಮಾರು ಒಂದಡಿ ಎತ್ತರದಲ್ಲಿ ಮರಕ್ಕೆ ಅಡ್ಡಲಾಗಿ ಒಂದಿಂಚು ಅಗಲ, ಒಂದಿಂಚು ಉದ್ದದ ಚೌಕಾಕಾರದ ರಂಧ್ರವನ್ನು ಮರದ ತಿರುಳನ್ನು ದಾಟಿ ಆಚೆ ಹೋಗುವಷ್ಟು ಆಳದಲ್ಲಿ ಕೊರೆಯಿಸಿದರು. ಈ ರೀತಿ ರಂಧ್ರ ಕೊರೆಯಿಸಿದ ಮರಗಳಲ್ಲಿ ಫಸಲು ಮರು ವರ್ಷದಿಂದಲೇ ಆರಂಭವಾಯಿತು. ಉಳಿದ ಮರಗಳಷ್ಟು ಫಸಲು ನೀಡುತ್ತಿಲ್ಲವಾದರೂ ತೀರ ಕಡಿಮೆ ಏನೂ ಇಲ್ಲ ಎಂದು ಶೆಟ್ಟರು ಹೇಳಿದ್ದಾರೆ.

ಇದೇ ರೀತಿ ಉಂಗುರ ಚಿಕಿತ್ಸೆ ಎಂದರೆ ಫಸಲು ನೀಡದ ಮರದ ಸುಮಾರು ಐದಡಿ ಎತ್ತರದ ಕಾಂಡದ ಮೇಲಿನ ಸಿಪ್ಪೆಯನ್ನು ಅಂದಾಜು ಒಂದಿಂಚು ಅಗಲಕ್ಕೆ ಉಂಗುರದಂತೆ ಸುತ್ತಲೂ ಕೆತ್ತಿ ತೆಗೆಯುವುದು. ಈ ರೀತಿ ಕೃಷಿಕರು ಸ್ವತಃ ಎಷ್ಟೋ ತಂತ್ರಗಳನ್ನು ಕಂಡುಕೊಂಡಿದ್ದಾರೆ.

ಮೂಲ : ಪ್ರಜಾವಾಣಿ, ಗುರುವಾರ 15, ಫೆಬ್ರವರಿ 2007

ಹಲಸಿನ ಮರಕ್ಕೆ ಮುಳ್ಳು ಚಿಕಿತ್ಸೆ

ಕೆಲವೆಡೆ ಪ್ರತಿ ವರ್ಷವೂ ಹಲಸಿನ ಮರಕ್ಕೆ ಮುಳ್ಳು ಹಾಕುವ ಪದ್ಧತಿ ಇದೆ. ಮರಕ್ಕೆ ಮುಳ್ಳು ಹಾಕಿದರೆ ಬಂಜೆ ಮರ ಫಸಲು ಬಿಡುತ್ತದೆ ಮತ್ತು ಇತರ ಮರಗಳ ಫಸಲು ಅಧಿಕವಾಗುತ್ತದೆ ಎಂದು ಜನ ನಂಬುತ್ತಾರೆ. ಎಲ್ಲಾ ಜಾತಿಯ ಮುಳ್ಳಿನ ಕೊನೆಗಳನ್ನು ಮರದ ಬುಡಕ್ಕೆ ಅಡ್ಡಾ ದಿಡ್ಡಿ ಎಳೆಯುತ್ತಾರೆ. ಇದರಿಂದ ಮರಕ್ಕೆ ರಕ್ಷಣೆಯೂ ಆದಂತಾಗುತ್ತದೆ. ಆ ಮುಳ್ಳು ಪ್ರತಿ ವರ್ಷ ಕರಗಿ ಗೊಬ್ಬರವಾಗುತ್ತದೆ. ಮರದ ಬುಡಕ್ಕೆ ಸಣ್ಣ ಕಲ್ಲುಗಳನ್ನು ಹಾಕುವುದರಿಂದ ಇದು ಮುಚ್ಚಿಗೆಯಂತೆ ಕೆಲಸಮಾಡುತ್ತದೆ. ಮರದ ಬುಡದಲ್ಲಿ ಬೇಸಿಗೆಯಲ್ಲಿಯೂ ತೇವಾಂಶ ಕಾಪಾಡುತ್ತದೆ.

ಮೂಲ: ಸಿರಿ ಸಮೃದ್ಧಿ, ಜುಲೈ – 2008, ಸಂಚಿಕೆ:

ಹಗೇವು-ಕಾಳು ಸಂಗ್ರಹಣೆಯ ಖಜಾನೆ

ಹಿಂದೆ ರೈತರು ತಮ್ಮ ಧಾನ್ಯಗಳನ್ನು ರಕ್ಷಿಸಿಡಲು ಹಗೇವುಗಳನ್ನು ಮಾಡಿ ಕೊಳ್ಳುತ್ತಿದ್ದರು. ಇಂತಹ ಪರಿಸರ ಸ್ನೇಹಿ ಹಗೇವುಗಳಲ್ಲಿ ಧಾನ್ಯಗಳನ್ನು ವರ್ಷಗಟ್ಟಲೆ ಇಟ್ಟರೂ ಹಾಳಾಗುತ್ತಿರಲಿಲ್ಲ. ಇದರಲ್ಲಿ ರೈತರು ಜೋಳ, ಸಜ್ಜೆ ನವಣೆ, ಭತ್ತ, ರಾಗಿ, ಶೇಂಗಾ, ಮೊದಲಾದ ಧಾನ್ಯಗಳನ್ನು ಸಂಗ್ರಹಿಸಿಡುತ್ತಿದ್ದರು. ಹಗೇವುಗಳಲ್ಲದೇ ಮನೆಯ ಕೋಣೆಗಳ ಗೋಡೆಗಳ ನಡುವೆ ಮಣ್ಣಿನ ದೊಡ್ಡ ಕಣಜಗಳಲ್ಲಿ ಹಾಗೂ ವಾಡೇವುಗಳಲ್ಲಿ ಕೂಡಾ ಧಾನ್ಯಗಳನ್ನು ವರ್ಷಗಟ್ಟಲೆ ಸಂಗ್ರಹಿಸಿಡುತ್ತಿದ್ದರು.


ಹಗೇವು ತೋಡುವುದು ಒಂದು ಕಲೆ ಮತ್ತು ಇದರ ನಿರ್ಮಾಣಕ್ಕೆ ಸ್ಥಳದ ಆಯ್ಕೆಯು ಬಹು ಮುಖ್ಯವಾಗಿದೆ. ಸ್ವಲ್ಪ ವ್ಯತ್ಯಾಸವಾದರೂ ಅದರೊಳಗಿನ ಧಾನ್ಯಗಳು ಹಾಳಾಗುತ್ತವೆ. ಇದನ್ನು ನಿರ್ಮಿಸಲು ಭೂಮಿಯು ಜೌಗು, ಸವಳು, ಕಪ್ಪು ಮಣ್ಣನ್ನು ಹೊಂದಿರದೇ ಕೆಂಪು, ಬಿಳಿ, ಸಜ್ಜೆಗರಸಿನ ಮಣ್ಣಿನ ಭೂಮಿ ಹೆಚ್ಚು ಸೂಕ್ತ. ಹಾಗೇ ನೀರಿನ ಗುಂಡಿ, ಚರಂಡಿ, ಮಳೆ ನೀರು ಹರಿಯುವ ಕಾಲುವೆಗಳು ಹತ್ತಿರ ಇರಬಾರದು. ಆದ್ದರಿಂದ ಮನೆಗಳ ಮುಂದೆ ಅಥವಾ ಹಿತ್ತಲಲ್ಲಿ ಎತ್ತರ ಜಾಗದಲ್ಲಿ ಹಗೇವುಗಳನ್ನು ನಿರ್ಮಿಸುತ್ತಿದ್ದರು.ಹಗೇವು ತೆಗೆಯುವಾಗ ಮೊದಲು ಒಬ್ಬ ಇಳಿದು ಹೋಗುವಷ್ಟು ಹಗೇವಿನ ಬಾಯಿ ತೆಗೆದು ನಂತರ ಚೌಕಾಕಾರವಾಗಿ ಅಥವಾ ವೃತ್ತಾಕಾರವಾಗಿ ಮಣ್ಣು ತೆಗೆಯುತ್ತಾ ಹೋಗಲಾಗುತ್ತದೆ. ಧಾನ್ಯಗಳನ್ನು ಸಂಗ್ರಹಿಸುವ ಮೊದಲು ಹಗೇವಿನಲ್ಲಿ ತೇವಾಂಶ ಇದ್ದರೆ ಬೆಂಕಿ ಹಾಕಿ ಬಿಸಿ ಮಾಡಿ ಸ್ವಚ್ಛಗೊಳಿಸುತ್ತಾರೆ. ಒಳ ಗೋಡೆಗಳನ್ನು ಚಿಕ್ಕ ಚಿಕ್ಕ ಕಲ್ಲುಗಳಿಂದ ಜೋಡಿಸಿ ಕಟ್ಟುತ್ತಾರೆ. ಕ್ರಿಮಿಕೀಟಗಳಿಂದ ರಕ್ಷಿಸಲು ಸಜ್ಜೆ ದಂಟುಗಳನ್ನು ಒಳಗೋಡೆ ಸುತ್ತ ಸಿಂಬೆ ಆಕಾರದಲ್ಲಿ ಜೋಡಿಸಿ, ತಳ ಭಾಗದಲ್ಲಿ ಜೋಳದ ಗುನಿ (ಕಾಳು ಬಿಡಿಸಿದ ಜೋಳದ ತೆನೆ) ಹಾಕುತ್ತಾರೆ. ಈ ರೀತಿ ಮಾಡಿದ 10–12 ಅಡಿ ಆಳ, 5–8 ಅಡಿ ಅಗಲದ ಹಗೇವುಗಳಲ್ಲಿ ಸಾಕಷ್ಟು ಧಾನ್ಯಗಳನ್ನು ಸಂಗ್ರಹಿಸಿಡಲು ಸಾಧ್ಯ. ಧಾನ್ಯ ತುಂಬಿದ ಮೇಲೆ ಚಾಪೆ ಅಥವಾ ಗೋಣಿ ಚೀಲ ಹಾಕಿ, ಮೇಲೆ ಕಳ್ಳಿಗಿಡದ ಗೊನೆ, ಒಣಗಿದ ಸಗಣಿ ಹಾಕಿ ನಂತರ ಚಪ್ಪಟೆ ಕಲ್ಲನ್ನು ಮುಚ್ಚುತ್ತಾರೆ. ಗಾಳಿ ಆಡದಂತೆ ಮಣ್ಣು ಜಾರದಂತೆ ಸಗಣಿ ಅಥವಾ ಕೆಸರು ರಾಡಿಯನ್ನು ಬಳಿದು ಮೇಲೆ ಮಣ್ಣಿನ ಗುಡ್ಡೆ ಮಾಡುತ್ತಾರೆ. ಧಾನ್ಯಗಳ ಅಗತ್ಯವಿದ್ದಾಗ ಮುಚ್ಚಿಕೆಯನ್ನು ತೆಗೆದು ಮೂರು ಗಂಟೆ ಗಾಳಿಯಾಡಲು ಬಿಟ್ಟು ನಂತರ ಆಮ್ಲಜನಕ ಇದೆಯೇ ಎಂದು ಪರೀಕ್ಷಿಸಲು ದೀಪವನ್ನು ಇಳಿಬಿಡುತ್ತಾರೆ. ದೀಪ ಆರದೇ ಇದ್ದರೆ ಒಳಗೆ ಇಳಿದು ಕಾಳನ್ನು ಮೇಲಕ್ಕೆ ತರುತ್ತಾರೆ. ಈ ರೀತಿ ಹಿಂದೆ ರೈತರು ಯಾವ ರಾಸಾಯನಿಕಗಳನ್ನು ಬಳಸದೇ ಧಾನ್ಯಗಳನ್ನು ಹಗೇವು, ಕಣಜ, ವಾಡೇವುಗಳಂತಹ, ಪರಿಸರ ಸ್ನೇಹಿ ಉಗ್ರಾಣಗಳಲ್ಲಿ ರಕ್ಷಿಸಿಡುತ್ತಿದ್ದರು. ಸಮೃದ್ಧಿಯ ಸಂಕೇತವಾದ ಈ ಹಗೇವುಗಳು ಇಂದು ಕಾಣೆಯಾಗುತ್ತಿರುವುದು ವಿಷಾದನೀಯ.

ಮೂಲ: ಪರಮೇಶ್ವರಯ್ಯ ಸೊಪ್ಪಿಮಠ, ಪ್ರಜಾವಾಣಿ, ಗುರುವಾರ 7, ಆಗಸ್ಟ್ 2008

ಎರೆಹುಳಗಳ ಪ್ಲಾಸ್ಟಿಕ್ ತೊಟ್ಟಿ

ಎರೆಹುಳು ಗೊಬ್ಬರದ ಬಳಕೆ ಬೆಳೆಗೆ ಅತ್ಯುತ್ತಮ ಪೋಷಕವೆಂಬುದು ರೈತರಿಗೆ ತಿಳಿದ ವಿಷಯ. ಆದರೆ ಎರೆಗೊಬ್ಬರ ತಯಾರಿಕೆಗೆ ಅಗತ್ಯವಾದ ಸಿಮೆಂಟ್ ತೊಟ್ಟಿಗಳನ್ನು ನಿರ್ಮಾಣ ಮಾಡಲು ಹತ್ತಾರು ಸಾವಿರ ರೂಪಾಯಿ ಖರ್ಚಾಗುತ್ತದೆ. ಇದಕ್ಕೆ ಪರಿಹಾರವಾಗಿ ಚಿಕ್ಕಮಗಳೂರು ಜಿಲ್ಲೆಯ, ಬೂತನಕಾಡು ಎಸ್ಟೇಟಿನ ಮಾಲೀಕರಾದ ಬಿ.ಸಿ. ಅರವಿಂದ್ ಹಾಗೂ ಯಲಗುಡಿಗೆ ಗ್ರಾಮದ ರೈತರಾದ ವೈ.ಆರ್.ಮಲ್ಲೇಶ್ ಜೊತೆಗೂಡಿ ಕಡಿಮೆ ವೆಚ್ಚದ ಪ್ಲಾಸ್ಟಿಕ್ ತೊಟ್ಟಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಈ ವಿಶೇಷ ಪ್ಲಾಸ್ಟಿಕ್ ತೊಟ್ಟಿಯು ಸುಮಾರು ನಾಲ್ಕುವರೆ ಕೆ.ಜಿ. ತೂಕವಿದೆ. ಹನ್ನೊಂದುವರೆ ಅಡಿ ಉದ್ದ ನಾಲ್ಕು ಅಡಿ ಅಗಲ ಮತ್ತು ಎರಡು ಅಡಿ ಎತ್ತರವಿದೆ. ಇದನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸುಲಭವಾಗಿ ಸಾಗಿಸಬಹುದು. ಇದರ ಕಿಟಕಿಗಳ ಮೂಲಕ ಸುಲಭವಾಗಿ ಗಾಳಿಯಾಡಲು ವ್ಯವಸ್ಥೆ ಮಾಡಿದ್ದಾರೆ. ಇದರಿಂದ ಎರೆಹುಳು ಬೆಳೆದು ಅವುಗಳ ಸಂತತಿಯೂ ಹೆಚ್ಚುತ್ತದೆ ಮತ್ತು ಗುಣಮಟ್ಟದ ಗೊಬ್ಬರವೂ ದೊರೆಯುತ್ತದೆ. ತೊಟ್ಟಿಯ ತಳಭಾಗದಲ್ಲಿ ಎರೆಜಲ ಸಂಗ್ರಹವಾಗಲು ರಂಧ್ರಗಳನ್ನು ಕೂಡ ಮಾಡಿದ್ದಾರೆ. ಈ ಎರೆಜಲವನ್ನು ಗಿಡಗಳ ಬೆಳವಣಿಗೆಗಾಗಿ ಹಾಗು ಕೀಟನಾಶಕವಾಗಿ ಉಪಯೋಗಿಸಲಾಗುತ್ತದೆ. ಪ್ಲಾಸ್ಟಿಕ್ ತೊಟ್ಟಿಯ ಬೆಲೆಯು ನಾಲ್ಕು ಸಾವಿರ ರೂಪಾಯಿಗಳಾಗಿದ್ದು 200 ಕ್ಕೂ ಹೆಚ್ಚು ತೊಟ್ಟಿಗಳು ಮಾರಾಟವಾಗಿವೆಯೆಂದು ಅರವಿಂದರವರು ಹೇಳಿದ್ದಾರೆ. ಪಟ್ಟಣದ ಹವ್ಯಾಸಿ ತೋಟಗಾರರಿಗೂ ಮನೆಯಲ್ಲೇ ಎರೆಗೊಬ್ಬರ ತಯಾರಿಸಲು ಈ ತೊಟ್ಟಿ ಸಹಾಯಕ. ಹಗುರವಾಗಿರುವುದರಿಂದ ತಾರಸಿಯ ಮೇಲೆ ಈ ಪ್ಲಾಸ್ಟಿಕ್ ತೊಟ್ಟಿಗಳಲ್ಲಿ ಅಡಿಗೆ ಮನೆಯ ತ್ಯಾಜ್ಯ ಬಳಸಿ ಎರೆಗೊಬ್ಬರ ತಯಾರಿಸಬಹುದು.

ಮೊದಲು ಈ ರೀತಿಯ ಪ್ಲಾಸ್ಟಿಕ್ ತೊಟ್ಟಿಗಳಲ್ಲಿ ಅರವಿಂದರವರು ಅಜೋಲಾವನ್ನು ಬೆಳೆಯುತ್ತಿದ್ದರಂತೆ. ಕ್ರಮೇಣವಾಗಿ ಇದನ್ನೇ ಸ್ವಲ್ಪ ಮಾರ್ಪಡಿಸಿ ಎರೆಹುಳು ಗೊಬ್ಬರ ತಯಾರಿಕೆಗೆ ಒಂದು ವರ್ಷದಿಂದ ಇದನ್ನೇ ಬಳಸಿಕೊಂಡು ಸಫಲತೆಯನ್ನು ಕಂಡಿದ್ದಾರೆ. ಈಗ ಇವರು ದೊಡ್ಡ ಪ್ರಮಾಣದಲ್ಲಿ ಎರೆಗೊಬ್ಬರವನ್ನು ತಯಾರಿಸುತ್ತಿದ್ದು ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡುತ್ತಿದ್ದಾರಂತೆ. ಇಂತಹ ತೊಟ್ಟಿಗಳನ್ನು ಸರ್ಕಾರದ ಮೂಲಕ ರೈತರಿಗೆ ಸಬ್ಸಿಡಿ ರೂಪದಲ್ಲಿ ದೊರಕಿಸಿ ಕೊಡಲು ಮಾತುಕತೆ ನಡೆಸುತ್ತಿದ್ದೇವೆ ಎಂದು ಅರವಿಂದರವರು ಹೇಳಿದ್ದಾರೆ.



ಹೆಚ್ಚಿನ ಮಾಹಿತಿಗಾಗಿ ಅರವಿಂದರವರ ಫೋನ್ 9448320473, 9448381955 ಗೆ ಸಂಪರ್ಕಿಸಬಹುದು

ಮೂಲ: ಪ್ರಜಾವಾಣಿ, ಗುರುವಾರ 17, ಜುಲೈ 2008.

ಸಾವಯವ ಪರಂಪರೆ ಕಥನ -ಭಾಗ 2

ಬೆಂಗಳೂರಿನ ಇನ್ಸ್‌ಟಿಟ್ಯೂಟ್ ಫಾರ್ ಕಲ್ಚರಲ್ ರಿಸರ್ಚ ಅಂಡ್ ಆಕ್ಷನ್ (ಇಕ್ರಾ) ಸಂಸ್ಥೆಯು ನಮ್ಮ ನಾಡಿನ ರೈತರು, ಸಾವಯವ ಕೃಷಿಯಲ್ಲಿ ನಡೆಸಿದ ಅನುಶೋಧನೆಗಳು, ಯಶೋಗಾಥೆಗಳು, ಮತ್ತು ಸಾಧನೆಗಳು ಕುರಿತ ಮಾಹಿತಿಗಳನ್ನು ಸಮಗ್ರವಾಗಿ ದಾಖಲಿಸಿ ಸಾವಯವ ಪರಂಪರೆಯ ಕಥನ ಎಂಬ ಪುಸ್ತಕ ಸರಣಿಯನ್ನು ಕಳೆದ ವರ್ಷದಿಂದ ಆರಂಭಮಾಡಿದೆ. ಸಾವಯವ ಕೃಷಿ ಅನುಶೋಧಕರು ನಡೆದು ಬಂದ ದಾರಿ ಭಾಗ-1 ಹಾಗೂ ಈ ವರ್ಷ ಕಥನ ಭಾಗ-2 ಪುಸ್ತಕಗಳು ಪ್ರಕಟಗೊಂಡಿವೆ. ಸಂತೇಶಿವರದ ರೈತ ಬಿ.ಬಸವರಾಜು ಇಪ್ಪತ್ತೈದು ವರ್ಷಗಳಲ್ಲಿ ತಾವು ಕೈಗೊಂಡ ಸಾವಯವ ಕೃಷಿಯ ಪ್ರಯೋಗಗಳನ್ನು , ಗುಲ್ಬರ್ಗ ಜಿಲ್ಲೆಯ ಪಟ್ಟಣ ಗ್ರಾಮದ ಬಸವರಾಜ ಶರಣಪ್ಪ ಜೀವಣಗಿ ತಮ್ಮ ಹದಿನೈದು ವರ್ಷಗಳ ಮಳೆಯಾಶ್ರಿತ ಸಾವಯವ ಕೃಷಿ ಅನುಭವಗಳನ್ನು , ಗುಂಡಪ್ಪ ಸಿದ್ದಪ್ಪ ದೂಳಗೊಂಡ ಅವರ ಸಣ್ಣ ಹಿಡುವಳಿಯಲ್ಲಿ ಸಾವಯವ ಕೃಷಿ ಗೆಲ್ಲಿಸಿರುವುದು ಹೇಗೆ ಎಂಬುದನ್ನು, ಮಾದ್ರಳ್ಳಿ ಕೆಂಪಣ್ಣ ಶಂಕರ್ ಗುರು ದಂಪತಿಗಳು ಸಾವಯವ ಕೃಷಿಯಲ್ಲಿ ಭತ್ತ ಬೆಳೆಯುವ ಮತ್ತು ಅವರ ನಾಟಿ ಬೀಜಗಳ ಪ್ರೀತಿಯನ್ನು , ದಕ್ಷಿಣ ಕನ್ನಡ ಜಿಲ್ಲೆ ಕುಕ್ಕಜಡ್ಕದ ಪೈಲೂರು ಶ್ರೀನಿವಾಸರಾಯರ ಶಿಸ್ತುಬದ್ಧ ತೋಟ ರಚನೆ ಮಾಹಿತಿಗಳನ್ನು ಕಥನ ಭಾಗ-2 ಪುಸ್ತಕವು ಒಳಗೊಂಡಿದೆ.

ಪುಸ್ತಕ ಹಾಗೂ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ :

ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರಿಸರ್ಚ್ ಅಂಡ್ ಆಕ್ಷನ್, (ICRA)

ಸಂಸ್ಕೃತಿ, 22, ಪಿ.ಬಿ. 7551, ಮೈಕೆಲ್ ಪಾಳ್ಯ, ನ್ಯೂ ತಿಪ್ಪಸಂದ್ರ ಪೋಸ್ಟ್, ಬೆಂಗಳೂರು -560075. ಫೋನ್ : 080-25283370

ತಲಪರಿಗೆ (ಜೀವ ಪೊರೆಯುವ ಜಲನಿಧಿ)

ತಲಪರಿಗೆ ಬಯಲು ಸೀಮೆಯ ಜಲನಿಧಿ. ಈ ಜಲ ನಿಧಿಗಳನ್ನು ಪುನರುಜ್ಜೀವನಗೊಳಿಸಲು ಸಮುದಾಯ ಹಾಗೂ ಸಂಸ್ಥೆಗಳು ಈಗ ಮುಂದಾಗಿವೆ. ಕೆರೆ ನಿರ್ವಹಣೆ ಜವಾಬ್ದಾರಿ ಹೊತ್ತಿರುವ ಜೆ.ಎಸ್.ವೈ.ಎಸ್ (ಜಲ ಸಂವರ್ಧನೆ ಯೋಜನೆ ಸಂಘ) ಸಂಸ್ಥೆಯು ಕೆರೆ ಹೂಳೆತ್ತುವ ಜೊತೆಗೆ ತಲಪರಿಗೆಗಳ ಪುನರುಜ್ಜೀವನಕ್ಕೆ ಕೈ ಹಾಕಿದೆ. ಈ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಲ್ಲಿಕಾರ್ಜುನ, ಭೂಷಣ್ ಮತ್ತು ನರಸಿಂಹಲು ಇವರು ಅನೇಕ ತಾಲ್ಲೂಕುಗಳಲ್ಲಿ ಸುತ್ತಾಡಿ ತಲಪರಿಗೆ ಕುರಿತ ಮಾಹಿತಿಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಹೊರ ತಂದಿದ್ದಾರೆ. ಇದಕ್ಕೆ ಹನಿಗೂಡಿ ಸೋಣದ ಹರಿಕಾರ ಶ್ರೀ ಪಡ್ರೆಯವರು ಮುನ್ನುಡಿ ಬರೆದಿದ್ದಾರೆ. ಜಲಸಂವರ್ಧನಾ ಸಂಘದ ಸಂವಹನ ತಜ್ಞರಾದ ಮಲ್ಲಿಕಾರ್ಜುನ ಹೊಸಪಾಳ್ಯರವರು ತಲಪರಿಗೆಗಳ ಮಾಹಿತಿ, ಉಗಮ, ರಚನೆ, ವಿವಿಧ ಆಕಾರಗಳು, ವಿಧಗಳ ಬಗ್ಗೆ, ಪತ್ರಕರ್ತರಾದ ಭೂಷಣ್ ಮಿಡಿಗೇಶಿಯವರು ತಲಪರಿಗೆಗಳ ನಿರ್ವಹಣೆ ಮತ್ತು ಸಾಂಸ್ಥಿಕ ವ್ಯವಸ್ಥೆಯನ್ನು , ಭೂ ವಿಜ್ಞಾನಿ ಗಳಾದ ಎಂ.ಎಸ್. ಜಯರಾಮ್‌ರವರು ತಲಪರಿಗೆಗಳ ಭೂವೈಜ್ಞಾನಿಕ ಇತಿಹಾಸವನ್ನು, ಪ್ರಜಾವಾಣಿ ವರದಿಗಾರರಾದ ಹೆಚ್.ಜಿ. ಪದ್ಮರಾಜುರವರು ಕೊರಟಗೆರೆ ತಾಲ್ಲೂಕಿನ ಸಿದ್ದರಬೆಟ್ಟದ ತಲಪರಿಗೆಗಳ ಬಗ್ಗೆ ಹಾಗೂ ಜಿಲ್ಲಾ ಸಾಮಾಜಿಕ ತಜ್ಞರಾದ ಸೌಭಾಗ್ಯವತಿಯವರು ಜಲ ಸಂವರ್ಧನೆ ಯೋಜನೆ ಯಲ್ಲಿ ತಲಪರಿಗೆಗಳ ಪುನಶ್ಚೇತನದ ಕಾರ್ಯ ನಿರ್ವಹಣೆಯ ಬಗ್ಗೆ ವಿವರಿಸಿದ್ದಾರೆ.

ಸಂಪಾದಕರು: ಮಲ್ಲಿಕಾರ್ಜುನ ಹೊಸಪಾಳ್ಯ, ಭೂಷಣ್ ಮಿಡಿಗೇಶಿ. ಬೆಲೆ: 100 ರೂ. ಪ್ರಕಾಶನ: ಧಾನ್ಯಸಂಸ್ಥೆ, ತೆನೆ ಮೊದಲನೆ ಮಹಡಿ, 3ನೇ ಮುಖ್ಯರಸ್ತೆ, ಸದಾಶಿವನಗರ, ತುಮಕೂರು - 572101.

ಗರತಿ-ಕಾಳುಗಳು ಮೊಳಕೆ ಬರಿಸುವ ಸಾಧನ

ಕೃಷಿ ವಿಜ್ಞಾನಿ ಡಾ. ಗುರುಪಾದ ದಂಡಗಿ ನಿವೃತ್ತಗೊಂಡರೂ ದಿನನಿತ್ಯದ ಬದುಕಿನಲ್ಲಿ ಉಪಯೋಗಕ್ಕೆ ಬರುವ ಒಂದಲ್ಲ ಒಂದು ಉಪಕರಣಗಳನ್ನು ಅನುಶೋಧಿಸುವ ಪ್ರವೃತ್ತಿ ಮುಂದುವರಿಸಿಕೊಂಡು ಬಂದಿರುವರು. ಇವರ ಇತ್ತೀಚೆಗಿನ ಅನುಶೋಧನೆ ಕಾಳುಮೊಳಕೆ ಬರಿಸುವ ಒಂದು ಸಾಧನ. ಇದಕ್ಕೆ 'ಗರತಿ' ಎಂದು ನಾಮಕರಣ ಮಾಡಿರುವರು. ಇದರ ಉಪಯೋಗದ ವಿವರ ಈ ಕೆಳಕಂಡಂತಿದೆ.

ಸ್ವಚ್ಛಗೊಳಿಸಿದ ದ್ವಿದಳ ಧಾನ್ಯದ ಕಾಳುಗಳನ್ನು ರಂಧ್ರವುಳ್ಳ ಚೀಲಗಳಲ್ಲಿ ಹಾಕಿ ಚೀಲದ ಬಾಯಿ ಮುಚ್ಚುವುದು. ಈ ಚೀಲವನ್ನು ನೀರಿನಲ್ಲಿ ಇಡೀ ರಾತ್ರಿ ಮುಳುಗಿಸಿಡುವುದು. ನಂತರ ಚೀಲವನ್ನು ನೀರಿನಿಂದ ಹೊರತೆಗೆದು ನೀರು ಬಸಿದ ನಂತರ ಒಂದು ಪಿ.ವಿ.ಸಿ ಟ್ಯೂಬ್‌ನಲ್ಲಿ ಸೇರಿಸಿ, ಎರಡೂ ಬದಿಗಳಲ್ಲಿ ರಂಧ್ರಮುಕ್ತ ಮುಚ್ಚಳ ಹಾಕಿ ಗೋಡೆಯ ಮೊಳೆಗೆ ಸಮತೋಲನ ದಲ್ಲಿರುವಂತೆ ತೂಗು ಹಾಕಬೇಕು. ಒಂದಕ್ಕಿಂತ ಹೆಚ್ಚು ಚೀಲಗಳನ್ನು ಬಳಸಿ ಬೇರೆ ಬೇರೆ ಕಾಳುಗಳನ್ನು ಹಾಕಿ ನೆನೆ ಇಟ್ಟು ಪ್ರತ್ಯೇಕವಾಗಿ ಮೊಳಕೆ ಬರಿಸಬಹುದು. ಏಕಕಾಲದಲ್ಲಿ ಮೊಳಕೆಗೆ ಇಟ್ಟರೂ ಬೇರೆ ಬೇರೆ ಕಾಳುಗಳು ಬೇರೆ ಬೇರೆ ಹಂತಗಳಲ್ಲಿ ಮೊಳಕೆಯೊಡೆದು ತಿನ್ನುವುದಕ್ಕೆ ಬರುತ್ತವೆ. ಬಳಸಿ ಹೆಚ್ಚಾಗಿ ಉಳಿದ ಮೊಳಕೆ ಕಾಳುಗಳನ್ನು ಪುನಃ ಟ್ಯೂಬ್‌ನಲ್ಲಿಟ್ಟರೆ ಅವುಗಳ ತಾಜಾತನ ಮುಂದುವರಿಯುತ್ತದೆ.


'ಗರತಿಯ' ಇತರ ಪ್ರಯೋಜನಗಳು :

1) ಗೋಧಿ ಹುಲ್ಲನ್ನು ಕೆಲವರು ತಾವೇ ಬೆಳೆದು ಆರೋಗ್ಯವರ್ಧನೆಗೆ ಅದರ ರಸಪಾನ ಮಾಡುವುದನ್ನು ರೂಢಿಸಿಕೊಂಡವರು ಇದಕ್ಕೆ ಬೀಜಗಳನ್ನು ಮಣ್ಣಿನೊಡನೆ ಬೆರೆಸುವ ಪೂರ್ವದಲ್ಲಿ ಮೊಳಕೆ ಬರಿಸಲು ಗರತಿ ಬಳಸಬಹುದು.

2) ಕಲ್ಲಂಗಡಿ ಹಣ್ಣಿನ ಬೀಜಗಳನ್ನು ಭೂಮಿಯಲ್ಲಿ ಊರುವ ಮೊದಲು ಅವು ಮೊಳಕೆ ಬರುವಂತೆ ಮಾಡಲು ಕೆಲ ಕೃಷಿಕರು ಈಗಾಗಲೇ ಗರತಿಯನ್ನು ತೃಪ್ತಿಕರವಾಗಿ ಬಳಸುತ್ತಿದ್ದಾರೆ.

ಹೆಚ್ಚಿನ ವಿವರಗಳಿಗೆ - ಡಾ. ಗುರುಪಾದ ದಂಡಗಿ, ವಿಜಯನಗರ, ಬೆಂಗಳೂರು, ಫೋನ್ - 9480585358.


ಅಕ್ಕಿಗೆ ಹೋಲಿಸಿ 100ಗ್ರಾಂ ತೃಣಧಾನ್ಯಗಳ ಪೌಷ್ಟಿಕಾಂಶಗಳು



ಪೌಷ್ಟಿಕಾಂಶ	ಅಕ್ಕಿ	ಸಜ್ಜೆ	ನವಣೆ	ಜೋಳ	ರಾಗಿ	ಸಾವೆ	ಆರ್ಕ
ಪ್ರೊಟೀನ್	6.8	11.6	12.3	10.4	7.3	7.7	6.2
ಕೊಬ್ಬು (ಗ್ರಾಂ)	0.5	5.0	4.3	1.9	1.3	4.7	2.2
ಲವಣ (ಗ್ರಾಂ)	0.6	2.3	3.3	1.6	2.7	1.5	4.4
ನಾರು (ಗ್ರಾಂ)	0.2	1.2	8.0	1.6	3.6	7.6	9.8
ಶರ್ಕರ (ಗ್ರಾಂ)	78.2	67.5	60.9	72.6	72.0	67.0	65.5
ಶಕ್ತಿ (ಕ್ಯಾಲೊರಿ)	345	361	331	349	328	341	307
ಕ್ಯಾಲ್ಸಿಯಂ (ಮಿ.ಗ್ರಾಂ)	10	42	31	25	344	17	20
ರಂಜಕ (ಮಿ.ಗ್ರಾಂ)	160	296	290	222	283	220	280
ಕಬ್ಬಿಣ (ಮಿ.ಗ್ರಾಂ)	0.7	8.0	2.8	4.1	3.9	9.3	5.0
ಕ್ಯರೋಟಿನ್(ಮಿ.ಗ್ರಾಂ)	0	132	32	47	42	0	0
ಥಯಾಮಿನ್(ಮಿ.ಗ್ರಾಂ)	0.06	0.33	0.59	0.37	0.42	0.30	0.33
ರೈಬೊಫ್ಲಾವಿನ್(ಮಿಗ್ರಾಂ)	0.06	0.25	0.11	0.13	0.19	0.09	0.10
ನಿಯಾಸಿನ್(ಮಿ.ಗ್ರಾಂ)	1.9	2.3	3.2	3.1	1.1	3.2	4.2
ಫೋಲಿಕ್ ಆ್ಯಸಿಡ್ (ಮಿ.ಗ್ರಾಂ)	8.0	45.5	15.0	20.0	18.3	9.0	-

ಊತ ಗೊಂಡಿರುವ ಮೂಗು ಮತ್ತು ನಾಲಿಗೆಗೆ ಚಿಕಿತ್ಸೆ

ಅಂತರ್ಯಾಮಿ ಪ್ರಧಾನ್‌ರವರು ಒರಿಸ್ಸಾ ರಾಜ್ಯದ, ಅಂಗುಲ್ ನಗರದ ಒಬ್ಬ ಸ್ಥಳೀಯ ಪಶು ಚಿಕಿತ್ಸಕ. ಇವರು ಜಾನುವಾರುಗಳಿಗೆ ಸಾಮಾನ್ಯವಾಗಿ ಬರುವ ಮೂಗು ಮತ್ತು ನಾಲಿಗೆಯ ಊತದ ಚಿಕಿತ್ಸೆಗೆ ಗಿಡ ಮೂಲಿಕೆಗಳನ್ನು ಉಪಯೋಗಿಸಿಕೊಂಡು ಔಷಧಿ ಒಂದನ್ನು ತಯಾರಿಸುತ್ತಾರೆ. ಅವರು 50 ಗ್ರಾಂ ಹಸಿಮೆಣಸಿನಕಾಯಿ, 50 ಗ್ರಾಂ ಸಾಸಿವೆ *(Brassica juncea)* ಮತ್ತು 100 ಗ್ರಾಂ ಎಳೆಯ ಬಾಳೆ ಗಿಡದ ದಿಂಡು (ಬಾಳೆಯ ಕಾಂಡದ ಒಳಭಾಗ), ಜೊತೆಗೆ 50 ಗ್ರಾಂ ಆಲದ ಮರದ *(Ficus benghalensis)* ಎಳೆಯ ಎಲೆಗಳನ್ನು ಬಳಸುತ್ತಾರೆ. ಇವೆಲ್ಲವುಗಳನ್ನು ಚೆನ್ನಾಗಿ ಅರೆದು ಅದಕ್ಕೆ ಎರಡು ಚಮಚ ಬಿಸಿ ತುಪ್ಪವನ್ನು ಸೇರಿಸುತ್ತಾರೆ. ಈ ಮಿಶ್ರಣವನ್ನು ಹಸುವಿಗೆ ಮೂರು ದಿನ ತಿನ್ನಿಸುತ್ತಾರೆ, ಜೊತೆಗೆ ಸ್ವಲ್ಪ ಮಿಶ್ರಣವನ್ನು ನಾಲಿಗೆಯ ಕೆಳಗೂ ಹಚ್ಚುತ್ತಾರೆ. ನಾಲ್ಕನೇ ದಿನಕ್ಕೆ ಹಸುವು ಚೇತರಿಸಿ ಕೊಂಡು ಆಹಾರವನ್ನು ತಿನ್ನಲು ಶುರು ಮಾಡುತ್ತದೆ ಎನ್ನುತ್ತಾರೆ. ಈ ರೀತಿ ಅವರು ಗುಣಪಡಿಸಿದ ಹಸುಗಳ ಸಂಖ್ಯೆ 25 ಮೀರಿರುತ್ತದೆ.



ವಿ. ಸೂ : ಸಾಸಿವೆ ಕಾಳುಗಳ ಉತ್ಪನ್ನಗಳು ಗಿಡಗಳಿಗೆ, ಪ್ರಾಣಿಗಳಿಗೆ ,ಬ್ಯಾಕ್ಟೀರಿಯಾ ಮತ್ತು ಯೀಸ್ಟ್ ಇವುಗಳಿಗೆ ಬೇರೆ ಬೇರೆ ರೀತಿಯಲ್ಲಿ ರಕ್ಷಣೆಯನ್ನು ಒದಗಿಸುತ್ತವೆ ಎಂಬುದು ವೈಜ್ಞಾನಿಕ ವಾಗಿ ಈಗಾಗಲೇ ದೃಢಪಟ್ಟಿದೆ. (ಆಧಾರ: Renu Deswal and sudhir K Sopory, phytochemistry 49(8) :2245-2253, 1998.) ಹಾಗೇ ಆಲದ ಮರದ ತೊಗಟೆಯು ಸಹ ಔಷಧೀಯ ಗುಣಗಳನ್ನು ಹೊಂದಿದೆ. (ಆಧಾರ Remi Shukla, Shweta Gupta, J.K. Gambhir, K.M. Prabhu and P.S. Murt : Journal of Ethnopharmacology 92 (1) :47-51,2004)

ಇದೇ ಕಾಯಿಲೆಯನ್ನು ಒರಿಸ್ಸಾ ರಾಜ್ಯದ, ಜಗತ್‌ಸಿಂಗ್‌ಪುರ ಜಿಲ್ಲೆಯ ಚೈತನ್ಯ ಚರಣದಾಸ್‌ರವರು ಕೂಡ ಗಿಡ ಮೂಲಿಕೆಗಳ ಮತ್ತೊಂದು ಔಷಧಿಯಿಂದ ಗುಣಪಡಿಸುತ್ತಾರೆ. ಅವರು 50 ಗ್ರಾಂ ಚವ್ಯಗಿಡದ *(Piper chaba Hunter)* ಬೇರು ಮತ್ತು ಎಲೆಗಳು, 100ಮಿ.ಲೀ ಹಸುವಿನ ಹಸಿ ಹಾಲು, 10 ಗ್ರಾಂ ಕರಿ ಮೆಣಸು *(Piper nigram)* ಮತ್ತು 20 ಗ್ರಾಂ ಶುಂಠಿ, ಇವುಗಳನ್ನು ಚೆನ್ನಾಗಿ ಅರೆದ ಮಿಶ್ರಣವನ್ನು ಕಾಯಿಲೆ ಪೀಡಿತ ಹಸುಗಳಿಗೆ ತಿನ್ನಿಸುತ್ತಾರೆ. ಹೀಗೆ ಎರಡು ಅಥವಾ ಮೂರು ದಿನ ತಿನ್ನಿಸುವುದರಿಂದ ಈ ಕಾಯಿಲೆಯು ಗುಣಮುಖವಾಗುತ್ತದೆಂದು ಹೇಳಿದ್ದಾರೆ. ಇವರು ಹತ್ತು ಹಸುಗಳಲ್ಲಿ ಈ ಕಾಯಿಲೆಯನ್ನು ಗುಣಪಡಿಸಿದ್ದಾರೆ.

ವಿ.ಸೂ: ಚವ್ಯಗಿಡದ ಕಾಂಡದ ತೊಗಟೆಯಿಂದ ತೆಗೆದಿರುವ ಎಥೆನಾಲ್ ಅಂಶವು ನೋವು ನಿವಾರಕ,ಉರಿಯುವಿಕೆಯ ಶಮನಕಾರಿ ಮತ್ತು ಆಮ್ಲಜನಕವಿರೋಧಿಯಾಗಿದೆ ಎಂಬುದು ವೈಜಾನಿಕವಾಗಿ ಈಗಾಗಲೇ ದೃಢಪಟ್ಟಿದೆ. (ಆಧಾರ Md. Taufiq -Ur-Rahman, Jamil Ahmad Shipi, Munirudding Ahmed and Chowdhary faiz Hussain, Journal of Ethnopharmacology, 99 (2): 203-209, 2005. Suchandra chatterjeee, Zareena niaz, S. Gautam, Soumyakanti Adhikari, Prasad S. Vaviyar and Arun Sharma : Food Chemistry 101 (2) 515-523,2007.) ಹಾಗೇ ಶುಂಠಿಯು ಕೂಡ ಉರಿಯುವಿಕೆಯನ್ನು ಶಮನಮಾಡುವ ಗುಣವನ್ನು ಹೊಂದಿದೆ. (ಆಧಾರ F. Aimbire, S.C. Penna, M. Rodrigues, K.C. Rodrigues, R.A.B. Lopes -Martins and J.A.A Sertie: Prostaglandins, Leukotrienes and Essential Fatty Acids 77(3-4) : 129-138, 2007)

ಅಜೀರ್ಣಕ್ಕೆ ಗಿಡಮೂಲಿಕೆಗಳು

ಜಾನುವಾರುಗಳು ಹಸಿ ಭತ್ತದ ಕಾಳುಗಳನ್ನು ತಿಂದರೆ ಅವುಗಳಿಗೆ ಅಜೀರ್ಣತೆ ಉಂಟಾಗುತ್ತದೆ. ಇದು ಅತಿ ಭೇದಿಗೆ ಕಾರಣವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಒರಿಸ್ಸಾ ರಾಜ್ಯದ ಬೊನೈಗರ್ ನಗರದ ಸರೋಜ್ ಕುಮಾರ್ ಬಿಸ್ವಾಲ್‌ರವರು 100ಗ್ರಾಂ ಅಡಿಗೆ ಸೋಡ *(sodium bi-corbonate)*, 50 ಗ್ರಾಂ ಶುಂಠಿಯ ಪುಡಿ, ಓಮ *(Carum Copticum)* ಕಾಳಿನ ಪುಡಿ ಮತ್ತು 50 ಗ್ರಾಂ ಉಪ್ಪು ಇವುಗಳನ್ನೆಲ್ಲಾ ಅರ್ಧ ಲೀಟರ್ ನೀರಿನಲ್ಲಿ ಸೇರಿಸಿ ಹಸುವಿಗೆ ಕುಡಿಸುತ್ತಾರೆ. ದಿನಕ್ಕೆ ಒಂದು ಸಾರಿಯಂತೆ ಏಳು ಅಥವಾ ಎಂಟು ದಿನಗಳವರೆಗೆ ಈ ಔಷಧಿ ಕೊಡುವುದರಿಂದ ಅಜೀರ್ಣತೆ ನಿವಾರಣೆಯಾಗುತ್ತದೆ ಎನ್ನಲಾಗಿದೆ. ಈ ತರಹದ ಚಿಕಿತ್ಸೆಯನ್ನು ಅವರು ಸುಮಾರು 20 ಜಾನುವಾರುಗಳಿಗೆ ಮಾಡಿ ಗುಣಪಡಿಸಿದ್ದಾರೆ.

ವಿ.ಸೂ: ಓಮ ಕಾಳುಗಳಲ್ಲಿನ ಕ್ಯಾಲ್ಸಿಯಂ ಅಂಶವು ಸೆಳೆತ ರೋಗಕ್ಕೆ ಪ್ರತಿ ರೋಧಿಯಾಗಿದೆ ಮತ್ತು ಪಿತ್ತ ಕೋಶವನ್ನು ರಕ್ಷಿಸುವಂತಹ ಗುಣಗಳನ್ನು ಹೊಂದಿದೆ ಎಂಬುದು ವೈಜ್ಞಾನಿಕವಾಗಿ ದೃಢಪಟ್ಟಿದೆ. (ಆಧಾರ : Gilani, A.H. Jabeen, Q, Ghayur M.N. Janbaz K.H and Akhtar M.S; Journal of Ethnopharmacology, 98 (1-2): 127-135,2005) ಹಾಗೇ ಶುಂಠಿಯು ಪಿತ್ತರಸವನ್ನು ಸ್ರವಿಸುವಂತೆ ಪ್ರೇರೇಪಿಸುತ್ತದೆ. (ಆಧಾರ : Journal of Ethnopharmacology : Vol 13, Issue 2)

ಮೂಲ : ಹನಿ ಬೀ, Vol 18(3) ಮತ್ತು 18(4) ಜುಲೈ - ಡಿಸೆಂಬರ್ 2007

ಹಲಗೆ ಹಣ್ಣಿನ ಉಪಯೋಗ

ಹಲಗೆ ಹಣ್ಣಿನ ಗಿಡವು ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ಕುರುಚಲಿನಂತೆ ಬೆಳೆಯುತ್ತದೆ. ಈ ಗಿಡದಲ್ಲಿ ನೇರಳೆ ಹಣ್ಣಿಗಿಂತ ಸ್ವಲ್ಪ ದೊಡ್ಡದಾದ ಕೆಂಪು ಹಣ್ಣುಗಳು ಮಾರ್ಚನಿಂದ ಮೇ ವರೆಗೆ ಗೊಂಚಲು ಗೊಂಚಲಾಗಿ ಬಿಡುತ್ತವೆ. ಇವುಗಳ ರುಚಿಯು ನಿಂಬೆ ಹಣ್ಣಿಗಿಂತಲೂ ಹುಳಿಯಾಗಿದ್ದು ಸ್ವಲ್ಪ ಸಿಹಿಯನ್ನೂ ಹೊಂದಿದೆ. ಗಿಡದ ಎಲೆಗಳನ್ನು ಜಾನುವಾರುಗಳ ಕೆಲವೊಂದು ಕಾಯಿಲೆಗಳಿಗೆ ಔಷಧಿಯಾಗಿ ಉಪಯೋಗಿಸಲಾಗುತ್ತಿದೆ. ಕೆಲವು ಬಾರಿ ಹಸುಗಳ ಕಾಲಿನಲ್ಲಿ ಯಾವ ಗಾಯವೂ ಇಲ್ಲದೇ ಅವು ಕುಂಟುತ್ತಾ ಇದ್ದರೆ, ಹಲಗೆ ಹಣ್ಣಿನ ಗಿಡದ ಸೊಪ್ಪನ್ನು ಜಜ್ಜಿ, ಅಕ್ಕಿ ತೊಳೆದ ನೀರಿನೊಂದಿಗೆ ಸೊಪ್ಪಿನ ರಸ ಬೆರೆಸಿ ನಾಲ್ಕು ಲೋಟ ಕುಡಿಸಿದರೆ, ಎರಡು ದಿನಗಳಲ್ಲಿ ಹಸುವು ಪೂರ್ತಿ ಗುಣವಾಗಿ ಓಡಾಡಲಾರಂಭಿಸುತ್ತದೆಯಂತೆ. ಹಾಗೇ ಜಾನುವಾರುಗಳು ಸಗಣಿ ಹಾಕದೆ, ಮೂತ್ರ ವಿಸರ್ಜಿಸದೆ, ನೀರು, ಮೇವು ಮುಟ್ಟದೆ ಬಳಲಿ ನಿಂತರೆ, ಇದಕ್ಕೂ ಇದೇ ಸೊಪ್ಪಿನ ಔಷಧವನ್ನು ಕೊಡುತ್ತಾರೆ. ಈ ಕಾಯಿಲೆಗಳನ್ನು ಆ ಪ್ರದೇಶಗಳಲ್ಲಿ ಕ್ರಮವಾಗಿ ಕುಂಟು ಹಲಗೆ ಮತ್ತು ಒಣ ಹಲಗೆ ಎಂದು ಕರೆಯುತ್ತಾರೆ. ಹೀಗೆ ಹಲಗೆ ಹಣ್ಣಿನ ಗಿಡವು ಜಾನುವಾರು ಚಿಕಿತ್ಸೆ ಮೂಲಕ ಕೃಷಿ ಮಿತ್ರ ಎನಿಸಿಕೊಂಡಿದೆ. ಹಲಗೆ ಹಣ್ಣುಗಳು ಹೆಚ್ಚು ಹುಳಿ ಇರುವ ಕಾರಣ ಉಪ್ಪಿನಕಾಯಿ ತಯಾರಿಕೆಗೆ ಹಾಗು ಅಡುಗೆಗಳಲ್ಲೂ ಬಳಸುತ್ತಾರೆ.

ಮೂಲ : ವಿಜಯ ಕರ್ನಾಟಕ, 9 ಎಪ್ರಿಲ್ 2008

ಕಾಲು, ಬಾಯಿ ರೋಗಕ್ಕೆ ಸಬ್ಬಸ್ಸಿಗೆ ಕಾಳುಗಳು

ಜಾನುವಾರುಗಳಿಗೆ ಕಾಲು ಮತ್ತು ಬಾಯಿ ರೋಗವು ಸಾಮಾನ್ಯವಾಗಿ ವೈರಸ್‌ಗಳಿಂದ ಬರುತ್ತದೆ. ಒರಿಸ್ಸಾ ರಾಜ್ಯದ, ಕಮಕ್ಯಾನಗರ್ ಹಳ್ಳಿಯವರಾದ ಬೃಂದಾವನ್ ಸಾಹುರವರು ಈ ಕಾಯಿಲೆಗೆ ಈಡಾದ ಜಾನುವಾರುಗಳನ್ನು ತಮ್ಮದೇ ಆದಂತಹ ಗ್ರಾಮೀಣ ಪದ್ಧತಿಯಲ್ಲಿ ಉಪಚರಿಸುತ್ತಾರೆ. ಇದಕ್ಕಾಗಿ ಅವರು ಎರಡು ಕರ್ಪೂರದ ಬಿಲ್ಲೆಗಳು, 100 ಮಿ.ಲೀ. ಟರ್‌ಪನ್‌ಟೈನ್ ಎಣ್ಣೆ ಮತ್ತು 10 ಮಿ.ಲೀ. ಸಬ್ಬಸ್ಸಿಗೆ *(Anethum graveolens)* ಕಾಳುಗಳಿಂದ ತೆಗೆದಿರುವಂತಹ ಎಣ್ಣೆ ಇವೆಲ್ಲವುಗಳನ್ನು ಚೆನ್ನಾಗಿ ಬೆರೆಸಿ ಗಾಯಗಳ ಮೇಲೆ ಮತ್ತು ಹುಣ್ಣುಗಳ ಮೇಲೆ ಲೇಪಿಸುತ್ತಾರೆ. ಕೆಚ್ಚಲಿನ ಮೇಲೆ, ಕಾಲು ಮತ್ತು ಬಾಯಿಗೆ ಆಗಿರುವಂತಹ ಹುಣ್ಣುಗಳಿಗೆ ಈ ಮಿಶ್ರಣವನ್ನು ದಿನಕ್ಕೆ ಎರಡು- ಮೂರು ಬಾರಿಯಂತೆ ಐದು ದಿನಗಳವರೆಗೆ ಲೇಪಿಸಿದರೆ ಹುಣ್ಣುಗಳು ಬೇಗ ವಾಸಿಯಾಗುತ್ತದೆಂದು ಹೇಳಿದ್ದಾರೆ. ಈ ರೀತಿ ಕಾಯಿಲೆಗೆ ಒಳಗಾಗಿರುವಂತಹ ನೂರಾರು ಜಾನುವಾರುಗಳನ್ನು ಅವರು ಈಗಾಗಲೇ ಗುಣಪಡಿಸಿದ್ದಾರೆ.

ವಿ.ಸೂ.-ಸಬ್ಬಸ್ಸಿಗೆ ಗಿಡ ಮತ್ತು ಕಾಳುಗಳಿಂದ ತೆಗೆದಿರುವಂತಹ ಎಣ್ಣೆಯು ವೈರಸ್‌ಗಳ ಸಂತಾನೋತ್ಪತ್ತಿಯನ್ನು ಕುಂಠಿತಗೊಳಿಸುತ್ತದೆ ಎಂಬುದು ವೈಜ್ಞಾನಿಕವಾಗಿ ದೃಢಪಟ್ಟಿದೆ. (ಆಧಾರ: J.R. Lazutka, J. Mieravskien, G. Slapyt and V. Dedony; Food and Chemical Toxicology - 39(5): 485 - 492, 2001.)

ಬ್ಯಾಕ್ಟೀರಿಯಾ ಸೋಂಕು ರೋಗಕ್ಕೆ ಅಳಲೇಕಾಯಿ

ಪ್ರಾಣಿಗಳಲ್ಲಿ ಜೊಲ್ಲು ಸೋರುವುದು, ಗಂಟಲು ಊತದ ನೋವು, ಕುತ್ತಿಗೆ ಹತ್ತಿರ ಚರ್ಮವು ಸಡಿಲಾಗಿ ಜೋತಾಡುತ್ತಿರುವುದು (ಗಂಗೆದೊಗಲು, ಕಂಬಳ) ಎದೆಯ ಭಾಗ ಮೈ ಬಿಸಿಯಾಗುವುದು, ನಿರುತ್ಸಾಹ, ಮೂಗು ಸೋರುವುದು ಮತ್ತು ಕಣ್ಣು ಕೆಂಪಗಾಗುವುದು ಇವು ಬ್ಯಾಕ್ಟೀರಿಯಾ ಸೋಂಕಿನಿಂದ ಉಂಟಾಗುವ ರೋಗದ ಗುಣ ಲಕ್ಷಣಗಳಾಗಿವೆ. ಇಂತಹ ಸೋಂಕುಗಳಿಗೆ ಒರಿಸ್ಸಾ ರಾಜ್ಯದ, ಸಂಬಲ್‌ಪುರ್ ಜಿಲ್ಲೆಯ ಆಶಿಶ್‌ರವರು, ಅಳಲೇ ಕಾಯಿಯನ್ನು*(Terminali chebula)* ಬಳಸುತ್ತಾರೆ.



ಒಂದು ಒಣಗಿರುವ ಅಳಲೇಕಾಯಿಯನ್ನು ಚೆನ್ನಾಗಿ ಅರೆದು ಪುಡಿ ಮಾಡಿ ಅದಕ್ಕೆ 20 ಗ್ರಾಂ ತುಪ್ಪ ಹಾಕಿ ಉಂಡೆ ಮಾಡಿ ಅದನ್ನು ಸೋಂಕು ಗೊಂಡ ಜಾನುವಾರುಗಳಿಗೆ ತಿನ್ನಿಸುತ್ತಾರೆ. ಮೂರು ದಿನಗಳಲ್ಲಿ ಕಾಯಿಲೆಯು ವಾಸಿಯಾಗುತ್ತದೆ ಎನ್ನಲಾಗಿದೆ. ಈ ತರಹದ.ಲಕ್ಷಣಗಳಿರುವ ಆರು ಜಾನುವಾರುಗಳನ್ನು ಆಶಿಶ್‌ರವರು ಉಪಚರಿಸಿ ಈಗಾಗಲೇ ಗುಣ ಪಡಿಸಿದ್ದಾರೆ.


ವಿ.ಸೂ.-ಅಳಲೇಕಾಯಿಯಿಂದ ತೆಗೆದಿರುವ ದ್ರಾವಣವು ಹಲ್ಲಿನ ಕ್ಷಯಕ್ಕೆ ಕಾರಣವಾಗಿರುವಂತ ಬ್ಯಾಕ್ಟೀರಿಯಾಗಳಲ್ಲಿ ಒಂದಾದ Streptococcus ನ ತೀವ್ರತೆಯನ್ನು ಕಡಿಮೆಮಾಡುತ್ತದೆ ಎಂದು ಅಧ್ಯಯನದಿಂದ ತಿಳಿದುಬಂದಿದೆ (ಆಧಾರA.G Jagtap and S.G Karkera : Journal of Ethnopharmacology, 68(1-3) : 299-306, 1999)

ಮೂಲ: ಹನಿ ಬೀ,' Vol 18(3) ಮತ್ತು 18(4) ಜುಲೈ - ಡಿಸೆಂಬರ್ 2007

ಗೋಮಾರಿ ರೋಗಕ್ಕೆ ಕತ್ತೆ ಹಾಲು

ಗೋಮಾರಿ (ದನದ ಪ್ಲೇಗು) ರೋಗವು ತೀವ್ರ ಅಪಾಯಕರ ಮತ್ತು ಪ್ರಾಣಾಂತಿಕ ಸಾಂಕ್ರಾಮಿಕ ರೋಗವಾಗಿದ್ದು, ಹೆಚ್ಚಾಗಿ ಜಾನುವಾರುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಪರಿಣಾಮ ಬಾಯಿ ಮತ್ತು ಆಹಾರ ಕೊಳವೆಯಲ್ಲಿ ಹುಣ್ಣಾಗಿ ಅತಿಭೇದಿಗೆ ಕಾರಣವಾಗುತ್ತದೆ. ಒರಿಸ್ಸಾ ರಾಜ್ಯದ ಬೊನೈಗರ್ ನಗರದ ಬಿಸ್ವಂತ್ ಪ್ರಧಾನ್‌ರವರು ದನಗಳಿಗೆ ಬರುವಂತಹ ಈ ಗೋಮಾರಿ ರೋಗಕ್ಕೆ ಕತ್ತೆಯ ಹಾಲನ್ನು ಬಳಸಿಕೊಳ್ಳುತ್ತಾರೆ.

ಇವರು 250 ಮಿ.ಲೀ. ಕತ್ತೆ ಹಾಲನ್ನು ರೋಗ ಪೀಡಿತ ಹಸುವಿಗೆ ಏಳು ದಿನಗಳವರೆಗೆ ಕುಡಿಸುತ್ತಾರೆ. ಇದರಿಂದ ಅತಿ ಭೇದಿಯು ನಿಯಂತ್ರಣಗೊಳ್ಳುತ್ತದೆ. ಈ ಪದ್ಧತಿಯನ್ನು ಪ್ರಧಾನ್‌ರವರು ತಮ್ಮ ಅಜ್ಜನವರಾದ ಆನಂದ್ ಪ್ರಧಾನ್‌ರವರಿಂದ ಕಲಿತದ್ದು ಎಂದಿದ್ದಾರೆ. ಸುಮಾರು 50 ವರ್ಷಗಳ ಹಿಂದೆ ಅತಿಭೇಧಿ ರೋಗ ಮಾರಕವಾಗಿ ಹಬ್ಬಿದಾಗ ತಮ್ಮ ಅಜ್ಜ ಆನಂದ್ ಪ್ರಧಾನ್ ಇದೇ ಔಷಧಿಯಿಂದ ಗುಣಪಡಿಸಿದ್ದರೆಂದು ಈಗಲೂ ನೆನಪು ಮಾಡಿಕೊಳ್ಳುತ್ತಾರೆ ಬಿಸ್ವಂತ್ ಪ್ರಧಾನರವರು.



ವಿ.ಸೂ.- ಕತ್ತೆಯ ಹಾಲನ್ನು ವೈರಸ್‌ಗಳ ನಿಯಂತ್ರಣಕ್ಕೆ ಉಪಯೋಗಿಸುವುದಕ್ಕೆ ಕಾರಣಗಳೇನು ಎನ್ನುವುದಕ್ಕೆ ಹೆಚ್ಚಿನ ಅಧ್ಯಯನ ನಡೆಯ ಬೇಕಿದೆ. ಹಸುಗಳ ಹಾಲಿನಲ್ಲಿರುವ ಲ್ಯಾಕ್ಟೋಫೆರಿನ್ ಪ್ರೋಟಿನ್, ವೈರಸ್‌ಗಳಿಂದ ಉಂಟಾದ ಸೋಂಕುಗಳನ್ನು ಗುಣಪಡಿಸಲು ಸಹಾಯವಾಗುತ್ತದೆಂದು ಅಧ್ಯಯನ ತಿಳಿಸಿದೆ. (ಆಧಾರ : Y. Pan, A. Lee, J. Wan, M.J. Coventry, W.P. Michalski, B. Shiell and H. Roginski; International Dairy Journal, 16 (11): 1252 - 1261, 2006.)

ಗೋಮಾರಿ ರೋಗಕ್ಕೆ ಬದನೆಕಾಯಿ ಕೂಡ ಔಷಧ !

ಒರಿಸ್ಸಾ ರಾಜ್ಯದ ಆತ್ಮಲಿಕ್ ಉಪವಿಭಾಗದವರಾದ ಮದನ್‌ಮೋಹನ್ ಪ್ರಧಾನ್‌ರವರು ಇದೇ ಗೋಮಾರಿ ಕಾಯಿಲೆಗೆ ಬದನೆಕಾಯಿ ಉಪಯೋಗಿಸುತ್ತಾರೆ.

ಇವರು ಇನ್ನೂ ಹೂ ಬಿಡದೇ ಇರುವಂತಹ ನಾಲ್ಕು ಎಳೆಯ ಮುಳ್ಳುಬದನೆ ಗಿಡದ ಬೇರುಗಳನ್ನು ಏಳು ಮೆಣಸಿನ ಕಾಳುಗಳೊಂದಿಗೆ ಅರೆಯುತ್ತಾರೆ. ಈ ಮಿಶ್ರಣವನ್ನು ಸತತವಾಗಿ ಏಳು ದಿನಗಳವರೆಗೆ ಹಸುವಿಗೆ ತಿನ್ನಲು ಕೊಡುತ್ತಾರೆ.

ವಿ.ಸೂ.-ಬದನೆಕಾಯಿಯಲ್ಲಿನ ಮೆಥನಾಲಿಕ್ ಅಂಶವು ಇಲಿಗಳ ಮೇಲೆ ನಡೆಸಿದ ಅಧ್ಯಯನದಿಂದ ನೋವು ನಿವಾರಕವಾಗಿ ಕೆಲಸ ಮಾಡುತ್ತದೆ ಎಂದು ತಿಳಿದು ಬಂದಿದೆ. (ಆಧಾರ M. Ahmed, M. Alimuzzaman and J. A. Shilpi; Fitoterapia 74 (1-2): 119-121, 2003)

ಮೂಲ: ಹನಿ ಬೀ, Vol 18(3) ಮತ್ತು 18(4) ಜುಲೈ - ಡಿಸೆಂಬರ್ 2007

ಶಿವಾನಂದ ಮೂಲಿಮನಿಯವರ "ಬ್ರಹ್ಮಾಸ್ತ್ರ"

ಗದಗ ಜಿಲ್ಲೆಯ, ಶಿರಹಟ್ಟಿ ತಾಲ್ಲೂಕಿನ, ಶಿಗ್ಲಿ ಗ್ರಾಮದ ಶಿವಾನಂದ ಮೂಲಿಮನಿಯವರು ನಾಲ್ಕು ವರ್ಷಗಳ ಹಿಂದೆ ಸುಭಾಷ್ ಪಾಳೇಕರರು ನಡೆಸುತ್ತಿದ್ದ ಸಭೆಯಲ್ಲಿ ಭಾಗವಹಿಸಿ ಸಾವಯವ ಕೀಟನಾಶಕಗಳ ತಯಾರಿಕೆ ಮತ್ತು ಬಳಕೆಗಳನ್ನು ಕಲಿತುಕೊಂಡರು. ಈಗ ತಮ್ಮ ಬೆಳೆಗಳಿಗೆ ಬೇಕಾಗುವಂತಹ ಕೀಟನಾಶಕ ಮತ್ತು ಶಿಲೀಂದ್ರನಾಶಕವನ್ನು ತಾವೇ ಸ್ವತಃ ತಯಾರಿಸಿಕೊಳ್ಳುತ್ತಿದ್ದು, ಇತರರಿಗೂ ಇದರ ಮಾಹಿತಿ ಮತ್ತು ಉಪಯೋಗವನ್ನು ತಿಳಿಸುತ್ತಿದ್ದಾರೆ. ಇವರು ತಯಾರಿಸಿರುವ ಕ್ರಿಮಿನಾಶಕಕ್ಕೆ "ಬ್ರಹ್ಮಾಸ್ತ್ರ"ಎಂದು ಹೆಸರಿಟ್ಟಿದ್ದಾರೆ. ಇದರ ತಯಾರಿಕೆಗಾಗಿ ಅವರು ಬೇವಿನ *(Neem)* ಎಲೆ ಎರಡೂವರೆ ಕಿಲೋ, ಬಿಲ್ವಪತ್ರೆ *(Aegle marmelos,corr.)* ಒಂದು ಕಿಲೋ, ಒಂದು ಕಿಲೋ ದತ್ತೂರಿ *(Datura fastuosa)*,ಒಂದು ಕಿಲೋ ಹೊಸಲಕ್ಕಿ *(Justicia prostrata)*, ಒಂದು ಕಿಲೋ ಹುಲಗಲಿ *(Pongamia glabra, vent.)*, ಒಂದು ಕಿಲೋ ಸೀತಾ ಪೇರಲ*(Annona squamosa)*, ಎರಡೂವರೆ ಕಿಲೋ ಬೆಳ್ಳುಳ್ಳಿ,*(Allium sativum)* ಒಂದು ಕಿಲೋ ಹಸಿಮೆಣಸಿನಕಾಯಿ ಮತ್ತು ಒಂದು ಕಿಲೋ ಔಡಲ ಎಲೆಗಳನ್ನು*(Castor leaves)*ಅರೆದು ಪೇಸ್ಟ್ ಮಾಡಿ 25 ಲೀಟರ್ ದೇಸಿ ಹಸುಗಳ ಮೂತ್ರದಲ್ಲಿ 30 ದಿನಗಳವರೆಗೆ ನೆನೆಸುತ್ತಾರೆ. ಈ ನೆನೆಸಿರುವಂತಹ ಮಿಶ್ರಣವನ್ನು ಪ್ರತಿದಿನ ಒಂದು ಸಾರಿ ಪ್ರದಕ್ಷಿಣಾಕಾರದಲ್ಲಿ ಒಂದು ಕೋಲಿನಿಂದ ತಿರುಗಿಸುತ್ತಾರೆ. 30 ದಿನಗಳ ನಂತರ ಈ ಮಿಶ್ರಣವು ಬಳಕೆಗೆ ಸಿದ್ಧವಾಗುತ್ತದೆ.

ಈ ಮಿಶ್ರಣವನ್ನು ಬೆಳೆ ಹಾಗೂ ಕ್ರಿಮಿಕೀಟಗಳ ಪ್ರಬಲತೆಯ ಪ್ರಮಾಣವನ್ನು ನೋಡಿಕೊಂಡು ಎರಡು ಅಥವಾ ಮೂರು ಬಾರಿ ಕೊಡುತ್ತಾರೆ.ಇದೇ ರೀತಿ ಶಿಲೀಂದ್ರ ನಾಶಕವನ್ನು ಕೂಡ ಅವರು ತಯಾರಿಸುತ್ತಾರೆ. ಇದಕ್ಕಾಗಿ ಅವರು ದೇಸಿ ಹಸುವಿನ ಹಾಲು ಒಂದು ಲೀಟರ್ ಮತ್ತು ಆರು ಲೀಟರ್ ಹಾಲಿನಿಂದ ತಯಾರಿಸಿದ ಮಜ್ಜಿಗೆ, 250 ಗ್ರಾಂ ಬೆಳ್ಳುಳ್ಳಿ, 50 ಗ್ರಾಂ ಶುಂಠಿ ಇವುಗಳನ್ನು ನುಣ್ಣಗೆ ಅರೆದು ಮೂರು ದಿನಗಳವರೆಗೆ ತಾಮ್ರದ ಪಾತ್ರೆಯಲ್ಲಿ ಹಾಕಿಡುತ್ತಾರೆ. ತಾಮ್ರದ ಪಾತ್ರೆಯಲ್ಲಿ ಹಾಕಿಟ್ಟರೆ ಕಾರ್ಬನ್ ಆಕ್ಸಿಕ್ಲೋರೈಡ್ ಬಿಡುಗಡೆ ಆಗಿ ಶಿಲೀಂದ್ರ ನಾಶಕದ ಪ್ರಬಲತೆ ಇನ್ನೂ ಹೆಚ್ಚಾಗುತ್ತದೆಯಂತೆ. ಮೂರು ದಿನಗಳ ನಂತರ ಬಳಕೆಗೆ ಸಿದ್ಧವಾಗುವ ಶಿಲೀಂದ್ರನಾಶಕವನ್ನು 16 ಲೀಟರ್ ನೀರಿಗೆ 300 ಮಿ.ಲೀ. ನಷ್ಟು ಸೇರಿಸುತ್ತಾರೆ. ಇದಕ್ಕೆ ಒಂದು ಲೀಟರ್ ಗೋಮೂತ್ರ ಹಾಗೂ ಒಂದು ಲೀಟರ್ ಸೋಪಿನ ಪುಡಿ ನೀರು ಸೇರಿಸಿ ಬಳಕೆ ಮಾಡಬಹುದು ಎಂದು ಹೇಳಿದ್ದಾರೆ. ಇವರ ಊರಾದ ಶಿಗ್ಲಿ ಗ್ರಾಮದಲ್ಲಿ ಒಂದು ವರ್ಷದ ಹಿಂದೆ ಪ್ರಾರಂಭವಾದ "ಭೂಮಿ ಮತ್ತು ಆಕಾಶ ಕೃಷಿಕರ ಸಂಘ"ದಲ್ಲಿ ಶಿವಾನಂದರವರು ಸದಸ್ಯರಾಗಿದ್ದಾರೆ. ಈ ಸಂಘವು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪ್ರತಿ ಸೋಮವಾರ ಸಾಯಂಕಾಲ ದಂದು ಕೃಷಿಕರನ್ನು ಒಟ್ಟುಗೂಡಿಸಿ "ಕೃಷಿ ಪುರಾಣ" ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ಈ ಕೃಷಿ ಪುರಾಣದಲ್ಲಿ ಸಾವಯವ ಕೃಷಿಯ ಬಗ್ಗೆ ಮಾಹಿತಿಗಳನ್ನು ಒದಗಿಸಲಾಗುತ್ತದೆ ಮತ್ತು ಸಾವಯವ ಕೃಷಿಕರಾಗಲು ಪ್ರೇರೇಪಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಶಿವಾನಂದರವರನ್ನು (ದೂರವಾಣಿ ಸಂಖ್ಯೆ 9886345992) ಸಂಪರ್ಕಿಸಬಹುದು.

ಜೇರಿಗೆಯ ಬೂದಿ ರೋಗಕ್ಕೆ ಕಷಾಯ

ಜೀರಿಗೆಯ ಗಿಡದ ಬೂದಿ ರೋಗವು ಅನಿರೀಕ್ಷಿತವಾದ ಮಳೆಯಿಂದ ಬರುತ್ತದೆ. ರೋಗ ಬಂದ ಗಿಡದ ಎಲೆಗಳೆಲ್ಲಾ ಕಪ್ಪಾಗಿ ಎರಡು- ಮೂರು ದಿನಗಳಲ್ಲಿ ಗಿಡವು ಸತ್ತು ಹೋಗುತ್ತದೆ. ಇದಕ್ಕೆ ಪರಿಹಾರವಾಗಿ ಗುಜರಾತ್ ರಾಜ್ಯದ ಸಬರಕಾಂತ ನಗರದ ಶಿವಭಾಯಿ ಧೂದಭಾಯಿ ಪಟೇಲ್‌ರವರು ಕೆಲ ಸಸ್ಯಗಳ ಎಲೆಗಳನ್ನು ಹಾಗೂ ಗೋಮೂತ್ರ ಬಳಸಿ ಮಾಡಿದ ಕಷಾಯವನ್ನು ಅಭಿವೃದ್ಧಿಪಡಿಸಿದ್ದಾರೆ.

ಶಿವಭಾಯಿಯವರು ಎಲೆಗಳನ್ನು ಉಪಯೋಗಿಸುವ ಗಿಡಗಳೆಂದರೆ ಬೇವು, ದೊಡ್ಡಹರಳು *(Jatropha curcas)*, ರಾಮಗುಳ್ಳ *(Solanum xanthocarpum Schrad)*, ಕೆಂಪು ಎಕ್ಕದ ಗಿಡ *(Calotrophis procera)*, ಲಕ್ಕಿಲಿಗಿಡ *(Vitex negundo)*, ಮತ್ತು ಆಡುಸೋಗೆ *(Adathoda vasica nees)*. ಈ ಎಲ್ಲಾ ಗಿಡಗಳಿಂದ 500 ಗ್ರಾಂ. ನಂತೆ ಎಲೆಗಳನ್ನು ತೆಗೆದುಕೊಂಡು 6 ಲೀಟರ್ ಗೋಮೂತ್ರ ಮತ್ತು 10 - 12 ಲೀಟರ್ ನೀರಿನೊಂದಿಗೆ ಮಿಶ್ರಣ ಮಾಡಿಕೊಳ್ಳುತ್ತಾರೆ. ಈ ಮಿಶ್ರಣವನ್ನು ಒಂದು ತಿಂಗಳಾದ ನಂತರ 10 ಲೀಟರ್ ಬರುವವರೆಗೂ ಕುದಿಸಿಕೊಳ್ಳುತ್ತಾರೆ. ಇಂತಹ ಕಷಾಯವನ್ನು ಮೂರು ದಿನಕ್ಕೆ ಒಂದು ಸಾರಿಯಂತೆ ಒಟ್ಟು ಎರಡು ಬಾರಿ ಜೀರಿಗೆ ಗಿಡದ ಎಲೆಗಳ ಮೇಲೆ ಸಿಂಪಡಿಸುತ್ತಾರೆ.

ಶುಂಠಿಯಲ್ಲಿ ಕಳೆ ನಿಯಂತ್ರಣ

ಗುಜರಾತ್ ರಾಜ್ಯದ, ದಾಹೋಡ್ ನಗರದ ರಣಜಿತ್ ಸಿನ್ಹಾರವರು ಶುಂಠಿಯ ಬೆಳೆಯಲ್ಲಿ ಕಳೆಯನ್ನು ನಿಯಂತ್ರಣಗೊಳಿಸಿ ಶುಂಠಿಯ ಇಳುವರಿಯನ್ನು ಹೆಚ್ಚಿಗೆ ಮಾಡುವಂತಹ ಒಂದು ಕ್ರಮ ಕಂಡುಕೊಂಡಿರುವರು. ಮೊದಲು ಬೆಳೆ ಹಾಕುವಂತಹ ಭೂಮಿಗೆ ಗೊಬ್ಬರ ಮತ್ತು ಹರಳಿನ ಹಿಂಡಿ*(Castor cake)* ಹಾಕಿ ತಯಾರು ಮಾಡಿಕೊಳ್ಳಬೇಕು. ಶುಂಠಿಯ ಬಿತ್ತನೆ ಮಾಡಬೇಕು. ಬಿತ್ತನೆಯ ಸಾಲುಗಳ ಮಧ್ಯದಲ್ಲಿ ಒಣಗಿದ ಹೊಂಗೆ *(Pongamia pinnata)* ಮತ್ತು ಮುತ್ತುಗದ *(Butea monosperma)* ಎಲೆಗಳನ್ನು ಹರಡಬೇಕು. ಇದರಿಂದ ಕಳೆಯು ನಿಯಂತ್ರಣಗೊಂಡು ಇಳುವರಿಯು ಹೆಚ್ಚುತ್ತದೆ ಎನ್ನುವುದು ರಣಜಿತ್ ಸಿನ್ಹಾರವರ ಅನುಭವ.

ಮೂಲ: ಹನಿ ಬೀ, Vol 18(3) ಮತ್ತು 18(4) ಜುಲೈ - ಡಿಸೆಂಬರ್ 2007

ಕೆಂಪುಮೂತಿ ಕೀಟದ ನಿಯಂತ್ರಣ

ತಮಿಳುನಾಡಿನ ಗಣಪತಿ ಸುಂದರಂ ರವರು ಕೆಂಪುಮೂತಿ ಕೀಟದ ದಾಳಿಗೆ ತುತ್ತಾದ ತೆಂಗಿನ ಮರವನ್ನು ಬುಡದಿಂದ ಒಂದು ಅಡಿಯಷ್ಟು ಬಿಟ್ಟು ಕತ್ತರಿಸಿ ಸುಡುತ್ತಾರೆ. ಆ ಬುಡದಿಂದ ಒಂದು ರೀತಿಯ ದ್ರಾವಣವು ಸ್ರವಿಸುತ್ತದೆ. ಈ ದ್ರಾವಣವು ಕೀಟಗಳನ್ನು ಆಕರ್ಷಿಸುವಂತಹ ವಾಸನೆಯನ್ನು ಹೊಂದಿದೆ. 10 ಎಕರೆಯಷ್ಟು ಭೂಭಾಗದ ಎಲ್ಲಾ ಕೀಟಗಳನ್ನು ಆಕರ್ಷಿಸುವಂತಹ ಸಾಮರ್ಥ್ಯ ಈ ಒಂದು ಮರದ ದ್ರಾವಣಕ್ಕಿದೆ. ಪ್ರತಿದಿನ ಬೆಳಗ್ಗೆ ಗಣಪತಿಯವರು ಹೀಗೆ ಆಕರ್ಷಿತಗೊಂಡ ಕೆಂಪುಮೂತಿ ಕೀಟಗಳನ್ನು ಸಂಗ್ರಹಿಸಿ ಸುಟ್ಟು ಹಾಕುತ್ತಾರೆ. ನಂತರ ಪುನಃ ಬುಡದ ಮೇಲ್ಭಾಗವನ್ನು ಓರೆಯಾಗಿ ಕತ್ತರಿಸಿ ಸ್ವಚ್ಛ ದ್ರಾವಣವು ಸ್ರವಿಸಲು ಅನುಕೂಲ ಮಾಡಿಕೊಡುತ್ತಾರೆ.

ಮೂಲ : ಹನಿ ಬೀ Vol 19(2) ಎಪ್ರಿಲ್ - ಜೂನ್ 2008.

ಜೀವ ಪೊರೆಯುವ ಜಲನಿಧಿಗಳು

ಬಯಲು ಸೀಮೆಯ "ತಲಪರಿಗೆ"

ಬಯಲು ಸೀಮೆಯಲ್ಲಿ ಕೆರೆ, ಕಟ್ಟೆ, ಹೊಳೆ, ಹಳ್ಳಗಳು ಬತ್ತಿದಾಗ ರೈತರಿಗೆ ಆಸರೆಯಾಗುವ ಜೀವ ತಳೆವ ಜಲನಿಧಿಗಳು "ತಲಪರಿಗೆ". ತುಮಕೂರು, ಕೋಲಾರ, ಚಿತ್ರದುರ್ಗ ಜಿಲ್ಲೆಗಳ ಗ್ರಾಮೀಣ ಜನರಿಗೆ ಪರಿಚಿತವಾದ ಹೆಸರು ಇದು. ಈ ತಲಪರಿಗೆಗಳು ಬೆಟ್ಟದ ತಪ್ಪಲು, ಕೆರೆ ಅಂಗಳ ಮತ್ತು ಕೆರೆಯ ಜಲಾನಯನ ಪ್ರದೇಶ ಮತ್ತು ಅಚ್ಚುಕಟ್ಟು ಪ್ರದೇಶದಲ್ಲಿರುತ್ತವೆ. ಸಾಮಾನ್ಯವಾಗಿ ಕೆರೆ ಅಂಗಳದಲ್ಲಿರುವ ತಲಪರಿಗೆಗಳ ಸಂಖ್ಯೆ ಹೆಚ್ಚು. ಬೆಟ್ಟದ ಮೇಲೆ ಸುರಿದ ಮಳೆ ನೀರು ಹನಿಹನಿಯಾಗಿ ಭೂಮಿ ಸೇರಿ ನಂತರ ಭೂಪದರದೊಳಕ್ಕೆ ಸೇರುತ್ತಾ ಉಸುಕು ಮಣ್ಣು ಅಥವಾ ಮರಳಿನ ಪ್ರದೇಶದಲ್ಲಿ ನೀರಿನ ಬುಗ್ಗೆಯಾಗಿ ಉಕ್ಕುತ್ತವೆ. ಇಂತಹ ಸ್ಥಳಗಳಲ್ಲಿ ತೋಡುವ ಗುಂಡಿಯೇ ತಲಪರಿಗೆ. ಸರಿಯಾಗಿ ನಿರ್ವಹಿಸಿದರೆ ಇವು ಜೀವಂತ ನೀರಸೆಲೆ.

ಈ ಭಾಗದಲ್ಲಿಬೇಸಿಗೆಯಲ್ಲಿ ತಲಪರಿಗೆಗಳು ರೈತರಿಗೆ ನೆರವಾಗುತ್ತವೆ. ಕೆರೆಯಂಗಳದಲ್ಲಿ ನೀರು ಖಾಲಿಯಾದ ಮೇಲೆ ಮೇಲ್ಮಣ್ಣು ಒಣಗಿ ಬಿರುಕು ಬಿಡುತ್ತದೆ. ಆದರೆ ತಲಪರಿಗೆ ಇರುವ ಭಾಗದಲ್ಲಿ ಸದಾ ತೇವಾಂಶ ಇರುತ್ತದೆ. ನೀರು ಒರತೆಯಿರುವ ಜಾಗ ಹೂಳಿನಿಂದ ತುಂಬಿ, ನೀರು ಹೊರಬರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಬೇಸಿಗೆಯ ದಿನಗಳಲ್ಲಿ ಇಂತಹ ನೈಸರ್ಗಿಕ ನೀರ ಚಿಲುಮೆಗಳಲ್ಲಿ ಅಚ್ಚುಕಟ್ಟಾಗಿ ಹೂಳು ತೆಗೆದು ಕಾಲುವೆ ಮಾಡಿ ನೀರು ಹಾಯಿಸಿಕೊಳ್ಳುವ ಪರಿಪಾಠ ರೈತರಲ್ಲಿದೆ.

ಕೆರೆ ಬತ್ತಿದ ಬೆನ್ನಲ್ಲೇ ತಲಪರಿಗೆಯ ದುರಸ್ತಿಗೆ ಶಿವರಾತ್ರಿಯ ಆಸು-ಪಾಸಿನಲ್ಲಿ ಜನರು ಮುಂದಾಗುತ್ತಾರೆ. ಉಳ್ಳವರಿಗೇ ನೀರು ಎಂಬ ಸ್ಥಿತಿ ಈ ವ್ಯವಸ್ಥೆಯದಲ್ಲ. ಕಾಲುವೆಯ ಹೂಳೆತ್ತಲು ಬಂದವರಿಗಷ್ಟೇ ನೀರು . ಊರ ಗೌಡರೂ ಬರಬೇಕು. ತಪ್ಪಿದರೆ ಆಳು ಕಳಿಸಬೇಕು. ತಪ್ಪಿದವರು ನೀರು ಬೇಕಾದರೆ ಶ್ರಮದಾನಕ್ಕೆ ಸೇರಿದವರಿಗೆ ತಪ್ಪುದಂಡ ಪಾವತಿಸಬೇಕು. ಸರ್ವರಿಗೂ ಸಮಪಾಲು ನೀತಿ, ನೀರು ಸಮುದಾಯದ ಸಂಪತ್ತು ಎಂಬುದು ಇದರ ಅನುಷ್ಠಾನ. ಜನರೆಲ್ಲ ಸೇರಿ ಸಲಿಕೆ, ಗುದ್ದಲಿ ಹಿಡಿದು ಶ್ರಮದಾನ ಮಾಡಿ ತಲಪರಿಗೆಯ ಹೂಳು ತೆಗೆಯುತ್ತಾರೆ. ಹೂಳು ತೆಗೆದಂತೆ ಗುಂಡಿಯಲ್ಲಿಜಲದ ಕಣ್ಣುಗಳು ತೆರೆದುಕೊಳ್ಳುತ್ತವೆ. ನೀರು ಗುಂಡಿಯಲ್ಲಿ ಶೇಖರಣೆಯಾಗುತ್ತದೆ. ಈ ನೀರನ್ನು ಆಗಾಗ ಖಾಲಿ ಮಾಡುತ್ತಿದ್ದರೆ ಮಾತ್ರ ಹೊಸ ನೀರು ಸಂಗ್ರಹವಾಗುತ್ತದೆ. ಇಲ್ಲವಾದರೆ ಜಲದ ಕಣ್ಣುಗಳು ಮುಚ್ಚಿ ಹೋಗಿ ನೀರಿನ ಒರತೆ ನಿಲ್ಲುತ್ತದೆ. ಆದ್ದರಿಂದಲೇ ರೈತರು ಪ್ರತಿ ವರ್ಷ ತಲಪರಿಗೆ ಸ್ವಚ್ಛಗೊಳಿಸುತ್ತಾರೆ. ಗಂಗಮ್ಮನ ಪೂಜೆ ಮಾಡುತ್ತಾರೆ. ರೈತರ ಪ್ರಕಾರ ಕೆರೆ ಬತ್ತಿದಾಗ, ಸುತ್ತಲಿನ ಕೊಳವೆ ಬಾವಿಗಳು ಸ್ತಬ್ಧವಾದರೂ ಕೆರೆ ಅಂಗಳದಲ್ಲಿನ ತಲಪರಿಗೆಗಳಲ್ಲಿ ನೀರಿನ ಒರತೆ ಇರುತ್ತದೆ. ಆದ್ದರಿಂದಲೇ ಇವು ರೈತ ಸಂಸ್ಕೃತಿಯ ಪ್ರತೀಕ ಮಾತ್ರವಲ್ಲ ,ಜಲ ಸುಸ್ಥಿರತೆಯ ದ್ಯೋತಕ. ಅಳಿವಿನಂಚಿನಲ್ಲಿರುವ ಈ ಜಲನಿಧಿಗಳನ್ನು ಪುನರುಜ್ಜೀವನಗೊಳಿಸಲು ಸಮುದಾಯ ಹಾಗೂ ಸಂಸ್ಥೆಗಳು ಈಗ ಮುಂದಾಗಿವೆ. ಕಳೆದೆರಡು ವರ್ಷಗಳಲ್ಲಿ ಸುಮಾರು 20 ಬಯಲು ಸೀಮೆಯ ತಲಪರಿಗೆಗಳು ಪುನಶ್ಚೇತನ ಗೊಂಡಿವೆ.

ಹೆಚ್ಚಿನ ಮಾಹಿತಿಗೆ ಮಲ್ಲಿಕಾರ್ಜುನ ಹೊಸಪಾಳ್ಯ ಸಂಪಾದಿಸಿರುವ 'ತಲಪರಿಗೆ' ಪುಸ್ತಕ (ವಿಮರ್ಷೆ ಪುಟ 5ರಲ್ಲಿ ಕೊಡಲಾಗಿದೆ) ನೋಡಿರಿ.

ಗುಳೇದಗುಡ್ಡದ "ಗುಂಡ"ಗಳು

ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದಲ್ಲಿ " ಗುಂಡ " ಎಂಬ ವಿಶಿಷ್ಟ ಬಾವಿಗಳಿವೆ. ಗುಳೇದಗುಡ್ಡ ಪಟ್ಟಣದ ಪಕ್ಕದಲ್ಲೇ ಪ್ರತ್ಯೇಕ ಹೆಸರಿಲ್ಲದ ಹಳ್ಳವೊಂದು ಹರಿಯುತ್ತದೆ. ಈ ಹಳ್ಳದ ಅಂಚಿನಲ್ಲಿ ಆರು ಗುಂಡಗಳಿವೆ. ಬಹು ಹಿಂದಿನ ಕಾಲದ ರಚನೆಗಳಿವು. ಇವನ್ನು ಯಾರು ಯಾವಾಗ ಕಟ್ಟಿಸಿದರೆಂಬುದು ಊರವರಿಗೂ ಗೊತ್ತಿಲ್ಲ, ಕನಿಷ್ಠ ಅಂದ್ರೆ ನೂರು ವರ್ಷವಾದ್ರೂ ಆಗಿರಬಹುದು ಎಂದು ಅಲ್ಲಿಯ ಜನರು ಹೇಳುತ್ತಾರೆ.

ಗುಂಡಗಳಲ್ಲಿ ಸ್ವಂತ ಜಲದ ಒರತೆ ಇರುವುದಿಲ್ಲ. ಹಳ್ಳದ ಪಕ್ಕದಲ್ಲೇ ತೋಡಿರುತ್ತಾರೆ. ಆಳ ಕಡಿಮೆ, ಹಳ್ಳದಿಂದ ಗುಂಡಕ್ಕೆ ನೀರು ಹರಿಯಲು ಕಾಲುವೆ ಇಲ್ಲ. ಬದಲಾಗಿ ನೀರು ಉಸುಕಿನ ಮೂಲಕ ಇಂಗಿ ತನ್ನಿಂದ ತಾನೇ ಶುದ್ಧವಾಗಿ ಗುಂಡ ಸೇರುತ್ತಿರುತ್ತದೆ. ಅಲ್ಲಿಂದ ಅದನ್ನು ಸೇದಿಕೊಂಡು ಬಳಸುವ ರೂಢಿಯಿದೆ. ಒಂದು ರೀತಿಯಲ್ಲಿ ಇವುಗಳನ್ನು ಉಸುಕು ಬಾವಿ ಎಂದೂ ಕರೆಯಬಹುದು. ಈ ಭಾಗದಲ್ಲಿ ಹೊಲಗಳಲ್ಲಿ ಹೆಚ್ಚಾದ ಮಳೆ ನೀರನ್ನು ಹೊರ ಬಿಡಲು ಮಾಡುವ ಬಾವಿಯಂತಹ ರಚನೆಗೆ ಗುಂಡಾವರ್ತಿ ಎಂದು ಕರೆಯಲಾಗಿದೆ. ಅದೇ ಹೆಸರು ಚುಟುಕಾಗಿ ಇದಕ್ಕೂ ಬಳಸುತ್ತಿರಬಹುದು. ಆಯತಾಕಾರದ ಗುಂಡಗಳೂ ಇವೆ. ನೀರು ಸೇದುವ ಅನುಕೂಲಕ್ಕಾಗಿ ಮೇಲೆ ಅಡ್ಡಲಾಗಿ ಕಲ್ಲಿನ ಹಲಗೆಗಳನ್ನು ಹಾಕಲಾಗಿದೆ. ಹತ್ತು ವರ್ಷಗಳ ಹಿಂದಿನವರೆಗೂ ಗುಂಡಗಳಿಂದ ಕುಡಿಯುವ ಸಲುವಾಗಿ ನೀರು ಒಯ್ದ ನೆನಪು ಸುತ್ತಲಿನ ಜನಕ್ಕಿದೆ. ಮಳೆಗಾಲ, ರಾತ್ರಿ ಹೊತ್ತು ಹಳ್ಳಕ್ಕಿಳಿಯದೆಯೇ ಪಕ್ಕದಲ್ಲಿಯೇ ಸುರಕ್ಷಿತವಾಗಿ ನೀರು ಎತ್ತಿ ಒಯ್ಯಲು ಅನುಕೂಲವಾಗುವಂತೆ ಇವನ್ನು ಕಟ್ಟಿದ್ದಾರೆ. ತಳದಲ್ಲಿ ಕೆಸರು ಇದ್ದು, ಬಂಡೆಕಲ್ಲು ಇರುವುದಿಲ್ಲ. ಹಳ್ಳದಲ್ಲಿ ನೀರಿನ ಹರಿವು ನಿಂತರೂ ಅಡಿಹರವು ಇರುತ್ತದೆ. ಬಾಗಲಕೋಟೆ ಜಿಲ್ಲೆಯ ಮತ್ತು ರಾಜ್ಯದ ಇತರೆಡೆಗಳಲ್ಲಿ ಈ ರೀತಿಯ ಉಸುಕು ಬಾವಿಗಳಿರಬಹುದು. ನೀರಿಗಾಗಿ ಹೊಸ ಹೊಸ ಕೊಳವೆಬಾವಿ ತೋಡಿಸುವುದಕ್ಕಿಂತ ಈ ಮೇಲ್ಜಲ ತುಂಬಿಕೊಡುವ ನಮ್ಮ ಪುರಾತನ ಜಲಮೂಲಗಳಿಗೆ ಮರುಜೀವ ಕೊಡುವುದು ಕಡಿಮೆ ವೆಚ್ಚದ ಕೆಲಸ, ಸುಸ್ಥಿರ ಹೆಜ್ಜೆಯೂ ಹೌದು.

ಕಾಸರಗೋಡಿನ ನೀರಿನ "ಗುಹೆ"ಗಳು

ಕುಡಿಯುವ ನೀರಿಗಾಗಿ ಹಾಗೂ ನೀರಾವರಿಗೆ ನೀರೊದಗಿಸುವ ಸುರಂಗಗಳೂ ಕಾಸರಗೋಡಿನ ವಿಶಿಷ್ಟ ಜಲಮೂಲಗಳು. ವಿಶೇಷವೆಂದರೆ ಈ ಸುರಂಗಗಳು ಹಲವಾರು ಕಡೆಗಳಲ್ಲಿ ಮೇಲಕ್ಕೆ ತೆರೆದುಕೊಂಡಿರುತ್ತವೆ. ಅಂದಾಜು ಮೂರು ಅಡಿ ಅಗಲ, ಆರಡಿ ಉದ್ದದ ಇಂತಹ ರಂಧ್ರಗಳನ್ನು ಸ್ಥಳೀಯರು ಬಾವಿ ಎಂದೂ ಕರೆಯುತ್ತಾರೆ. ಬಹು ದೂರದವರೆಗೆ ಸುರಂಗ ಅಗೆಯುವಾಗ ಒಳಗೆ ಗಾಳಿ, ಬೆಳಕು ಸಿಗಲೆಂದು ಈ ಥರದ ಬಾವಿಗಳನ್ನು ಮಾಡಲು ಕಾರಣವಾಗಿದೆ ಹಾಗೂ ಸುಲಭವಾಗಿ ಮಣ್ಣೆತ್ತಿ ಹೊರಹಾಕುವುದಕ್ಕೂ ಆಗಿತ್ತು. ಹಲವು ದೇಶಗಳಲ್ಲಿಯೂ ಸಹ ಇಂತಹ ಸುರಂಗಗಳು ಈಗಲೂ ಕಾಣಸಿಗುತ್ತವೆ. ಇರಾನ್ ಹಾಗೂ ಆಫ್ಘಾನಿಸ್ತಾನ್‌ನಲ್ಲಿ ಇಂತಹ ಸುರಂಗಗಳಿಗೆ 'ಕನಾಟ್' ಎಂದು ಕರೆಯುತ್ತಾರೆ. ಚೀನಾದಲ್ಲಿ ಇವುಗಳಿಗೆ 'ಕರೇಜ್' ಎಂದು ಹೆಸರು. ಶತಮಾನ ಮೀರಿರಬಹುದಾದ ಕಾಸರ ಗೋಡು ಜಿಲ್ಲೆಯ ಜಲ ಸುರಂಗಗಳ ಚರಿತ್ರೆಯ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.

ಮೂಲ – ವಿಜಯ ಕರ್ನಾಟಕ, ಶ್ರೀ ಪಡ್ರೆಯವರ 'ಹನಿಗೂಡಿಸೋಣ' ಲೇಖನದಿಂದ.

ದೊಡ್ಡ (ಕಾಡು) ಏಲಕ್ಕಿ

ದೊಡ್ಡ ಏಲಕ್ಕಿಯು (*Amomum sabulatom*) ನೇಪಾಳ, ಸಿಕ್ಕಿಂ, ಅಸ್ಸಾಂ, ಪ್ರದೇಶದ ವಾಣಿಜ್ಯ ಬೆಳೆಯಾದರೂ ಇಂದು ನಾನಾ ಕಾರಣಗಳಿಂದ ನಿರ್ಲಕ್ಷ್ಯಕ್ಕೊಳಗಾಗಿದೆ. ಈ ಜಾತಿಯ ತಳಿ ಒಂದನ್ನು ಶಿರಸಿ ತಾಲೂಕಿನ ಮಂಜುಗುಣಿ ಸಮೀಪದ ಹಾವಿನ ಕೊಡ್ಲುವಿನಿಂದ ಸಿದ್ದಾಪುರ ತಾಲೂಕು ಹೊಸ್ತೋಟದ ಗಣಪತಿ ಭಟ್ ಮೀಸೆಯವರು ನಾಲ್ಕು ವರ್ಷಗಳ ಹಿಂದೆ ತಂದು ಬೆಳೆಸಿದ್ದಾರೆ. ಇದು ನೋಡುವುದಕ್ಕೆ ಸಾಮಾನ್ಯ ಏಲಕ್ಕಿ ಗಿಡದಂತೆಯೇ ಇದ್ದು ಕಾಯಿಗಳು ಗಿಡದ ತುದಿಯಲ್ಲಿ ಬಿಡುತ್ತವೆ. ಜಾಯಿಕಾಯಿ ಗಾತ್ರದಷ್ಟಿರುವ ಇದರ ಕಾಯಿಗಳು ಹಳದಿ ಬಣ್ಣಕ್ಕೆ ತಿರುಗಿದಾಗ ಕೊಯ್ಲಿಗೆ ಸಿದ್ಧವಾಗುತ್ತವೆ. ಇಂತಹ ಹಣ್ಣುಗಳನ್ನು ಬಿಸಿಲು ಅಥವಾ ಬೆಂಕಿ ಶಾಖದಲ್ಲಿ ಒಣಗಿಸಬಹುದು. ಈ ಏಲಕ್ಕಿ ಕಾಯಿಗಳಲ್ಲಿರುವ ಬೀಜಗಳಿಂದ ಸಸಿಗಳನ್ನು ತಯಾರಿಸಲಾಗುತ್ತದೆ. ತೇವ ಮತ್ತು ನೆರಳಿನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುವ ಇದನ್ನು ಸಣ್ಣ ಏಲಕ್ಕಿ ಮಾದರಿಯಲ್ಲೇ ಅಡಿಕೆ ಮತ್ತು ತೆಂಗಿನ ತೋಟದಲ್ಲೂ ಉಪಬೆಳೆಯಾಗಿ ನಾಟಿ ಮಾಡಬಹುದು. ಸಣ್ಣ ಏಲಕ್ಕಿ ಹಾಗೂ ದೊಡ್ಡ ಏಲಕ್ಕಿ ಕಾಯಿಯ ಬೀಜಗಳು ಗಾತ್ರದಲ್ಲಿ ಒಂದೇ ಇದ್ದು ದೊಡ್ಡ ಏಲಕ್ಕಿ ಕಾಯಿಗಳು ಗಿಡದ ತುದಿಯಲ್ಲಿ ಬಿಡುವುದರಿಂದ ಹಾವು, ಹುಳುಗಳ ಕಾಟ ಇದಕ್ಕಿಲ್ಲ. ಇದರ ಎಲೆಯೂ ಪರಿಮಳವನ್ನು ಹೊಂದಿದೆ. ನಾನಾ ಸಂಬಾರ್ ಪದಾರ್ಥಗಳ ರುಚಿ, ವಾಸನೆಗಳನ್ನು ಇದೊಂದೇ ನೀಡುತ್ತದೆ. ಹೆಚ್ಚಿನ ಇಳುವರಿಯನ್ನು ಕೊಡುವ ದೊಡ್ಡ ಏಲಕ್ಕಿಯು ಅನೇಕ ಔಷಧೀಯ ಗುಣಗಳನ್ನು ಹೊಂದಿದೆ. ಇದು ತೀಕ್ಷ್ಣ ಮತ್ತು ಅಷ್ಟೇ ಮಧುರ ರುಚಿಯನ್ನು ಹೊಂದಿದ್ದು, ಹೃದಯ ಮತ್ತು ಪಿತ್ತಜನಕಾಂಗಳಿಗೆ ಶಕ್ತಿದಾಯಕವಾಗಿ ಬಳಸುತ್ತಾರೆ. ನಿದ್ರೆ ಬರಿಸುವ ಮತ್ತು ಹಸಿವು ಉಂಟುಮಾಡುವ ಗುಣವೂ ಇದಕ್ಕಿದೆಯಂತೆ. ತಲೆ ಮತ್ತು ಹಲ್ಲು ನೋವು ನಿವಾರಣೆಯ ಕೆಲವು ಔಷಧಗಳಲ್ಲೂ ಇದನ್ನು ಬಳಸುತ್ತಾರೆ. ಮೂತ್ರ ಪಿಂಡದಲ್ಲಿ ಕಲ್ಲು ಬೆಳೆದಾಗ ಈ ಏಲಕ್ಕಿಯನ್ನು ಕಲ್ಲಂಗಡಿ ಬೀಜಗಳ ಜೊತೆ ಸೇರಿಸಿ ಮೂತ್ರವರ್ಧಕವಾಗಿ ಕೊಡುವುದಿದೆಯಂತೆ. ಹಾವು ಚೇಳಿನ ವಿಷಕ್ಕೆ ಪ್ರತಿಯಾಗಿ ಇದನ್ನು ಬಳಸುತ್ತಾರೆ. ಇಷ್ಟಾದರೂ ಈ ದೊಡ್ಡ ಏಲಕ್ಕಿ ಕೃಷಿ ನಿರ್ಲಕ್ಷ್ಯಗೊಂಡಿರುವುದು ದುರಂತ.

ಮೂಲ : ವಿಜಯ ಕರ್ನಾಟಕ, 26 ಮಾರ್ಚ 2008.

ಮಾವಿನ ಶುಂಠಿ

ಮಾವಿನ ಶುಂಠಿಯು (*Curcuma amada. Roxb*) ಗಿಡವು ಅರಿಶಿನ ಗಿಡ ದಂತೆಯೇ ಇದ್ದು, ಶುಂಠಿಯ ತರಹ ಗಡ್ಡೆಗಳನ್ನು ಹೊಂದಿರುತ್ತವೆ. ಇದನ್ನು ಮ್ಯಾಂಗ್ಯೋ ಜಿಂಜರ್ ಎಂದು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲಮಾವು, ಅಂಬೆಕೊಂಬು ಎಂದೂ ಕರೆಯುತ್ತಾರೆ. ಮಾವಿನಕಾಯಿ ಇಲ್ಲದ ಸಮಯದಲ್ಲಿ ಮಾವಿನ ಶುಂಠಿಯನ್ನು ಬಳಸಿ ಮಾವಿನ ಪರಿಮಳ ಹೊತ್ತ ಪದಾರ್ಥಗಳನ್ನು ತಯಾರಿಸಬಹುದು. ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಚಿರಪರಿಚಿತವಾಗಿರುವ ಈ ಶುಂಠಿಯನ್ನು ಅಲ್ಲಿಯ ಜನರು ಗೊಜ್ಜು, ಚಟ್ನಿ, ತಂಬುಳಿ ಇತ್ಯಾದಿಗಳನ್ನು ತಯಾರಿಸಲು ಬಳಸುತ್ತಾರೆ. ಇದನ್ನು ಬೆಳೆಸುವುದು ತುಂಬಾ ಸುಲಭ. ಮಾವಿನ ಶುಂಠಿಯ ಒಂದು ತುಂಡು ಗಡ್ಡೆಯನ್ನು ಮಣ್ಣಿನಲ್ಲಿ ಹಾಕಿದರೆ ಸಮೃದ್ಧವಾದ ಗಡ್ಡೆಗಳು ಲಭ್ಯವಾಗುತ್ತವೆ. ಇನ್ನೂ ತರಕಾರಿ ಮಾರುಕಟ್ಟೆಯನ್ನು ಪ್ರವೇಶಿಸದ ಇದು ಬರಿ ಹಿತ್ತಲಿಗೇ ಮೀಸಲಾಗಿದೆ.

ಮೂಲ : ಪ್ರಜಾವಾಣಿ, ಗುರುವಾರ 7 ಫೆಬ್ರವರಿ 2008.

ಹೆಗ್ಗೆಣಸು

ಹೆಗ್ಗೆಣಸು (*Discorea bulbifera*) ವಾಸ್ತವವಾಗಿ ಕಾಡಿನ ಬಳ್ಳಿ. ಕಾಡು ಹಂದಿಗೆ ಪ್ರಿಯವಾದ ಕಾರಣ ಈ ಗಡ್ಡೆಯನ್ನು ಸಂಸ್ಕೃತದಲ್ಲಿ 'ವಾರಾಹಿ' ಎಂದು ಕರೆಯುತ್ತಾರೆ. ಕರಾವಳಿ ಜಿಲ್ಲೆಗಳಲ್ಲಿ ಇದನ್ನು ನೇಗಿಲು ಗೊನ್ನೆ, ಹೆಡಿಗೆ ಗೊನ್ನೆ, ನಾಂಗ್ರಚಿನ್ನ ಎಂದು ಕರೆಯುತ್ತಾರೆ. ಒಂದು ಕಾಲದಲ್ಲಿ ಆಹಾರವಾಗಿ ಬಳಕೆಯಲ್ಲಿದ್ದ ಈ ಗಡ್ಡೆಗಳಿಂದು ಸಂಪೂರ್ಣ ಅಪರಿಚಿತವಾಗಿವೆ. ಹೆಗ್ಗೆಣಸು ಗಿಡದ ಎಲೆಗಳು ವೀಳ್ಯದೆಲೆ ಆಕಾರದಲ್ಲಿದ್ದು, ಎಲೆ ಕಂಕುಳದಲ್ಲಿ ಬರುವ ಚಿಕ್ಕ ಚಿಕ್ಕ ಗೆಡ್ಡೆಗಳನ್ನು ಸಗಣಿ ಅಥವಾ ಮಣ್ಣಿನ ಉಂಡೆಯಲ್ಲಿ ಹುದುಗಿಸಿ ಕಾಪಾಡುತ್ತಾರೆ. ನಾಲ್ಕಾರು ತಿಂಗಳಲ್ಲಿ ಭೂಮಿಯಡಿ ನೇಗಿಲಿನಾಕಾರದ ಗೆಡ್ಡೆ ಬೆಳೆಯುತ್ತದೆ. ಸಂಕ್ರಾತಿ ತರುವಾಯ ಗೆಡ್ಡೆ ಬಳಸಲು ಸಿದ್ಧವಾಗುತ್ತದೆ. ಆದರೆ ಮೇಲಿನ ಬಳ್ಳಿ ಒಣಗಿದ ತರುವಾಯ ಗೆಡ್ಡೆ ಅಗೆದು ತೆಗೆಯುವುದು ರೂಢಿ. ಈ ಗೆಡ್ಡೆಯು ಅನೇಕ ಔಷಧೀಯ ಗುಣಗಳನ್ನು ಹೊಂದಿದ್ದು, ಇದರಲ್ಲಿ ದೇಹದಾತು ವರ್ಧಕ ಶಕ್ತಿ ಮತ್ತು ಕಾಂತಿವರ್ಧಕ ಗುಣಗಳಿವೆ. ಅಲ್ಲದೆ ಚರ್ಮ ಕಾಯಿಲೆ, ಕಫದೋಷ, ಮೂತ್ರ ತೊಂದರೆ, ಜಂತಿನ ಬಾಧೆ ಪರಿಹಾರಕ್ಕೆ ಉಪಯೋಗಿಸಲಾಗುತ್ತದಲ್ಲದೇ ಮುಪ್ಪು ತಡೆಯುವ ಸಂಜೀವಿನಿ ಎಂಬ ಪ್ರಶಂಸೆಯೂ ಇದಕ್ಕಿದೆ ! ಕಿಶೋರಾವಸ್ಥೆಯ ಮಕ್ಕಳ ಮಾನಸಿಕ, ದೈಹಿಕ ಬೆಳವಣಿಗೆಗೆ ಸಹಾಯಕವಾಗುವಂತಹ ಡಯೋಸ್ಜೆನಿನ್ ಸ್ಟೀರಾಯಿಡ್‌ಗಳು ಇದರಲ್ಲಿವೆಯಂತೆ. ಇಂತಹ ಗುಣಗಳನ್ನು ಹೊಂದಿರುವ ಈ ಗಡ್ಡೆಗೆಣಸಿಗೆ ಹಿಂದಿನ ತಲೆಮಾರಿನ ಜನಪದರು ವಿಶೇಷ ಪ್ರಾಶಸ್ತ್ಯ ಏತ್ತಿದ್ದರು.

ಮೂಲ : ವಿಜಯ ಕರ್ನಾಟಕ, 27ಫೆಬ್ರವರಿ 2008

ಕೆಂಪು ಹುಣಸೆಕಾಯಿ

ಸಾಮಾನ್ಯವಾಗಿ ಹುಣಸೆಕಾಯಿಯ ತಿರುಳು ಬಿಳಿಯ ಬಣ್ಣದ್ದಾಗಿರುತ್ತದೆ. ಆದರೆ ಇಲ್ಲೊಂದು 150 ವರ್ಷಗಳಷ್ಟು ಪ್ರಾಚೀನ ಕಾಲದ ಹುಣಸೇಮರದಲ್ಲಿ ಬಿಡುವ ಹುಣಸೇ ಕಾಯಿಗಳ ತಿರುಳೆಲ್ಲಾ ಕೆಂಪು ಬಣ್ಣದವುಗಳಾಗಿವೆ ! ಇಂತಹ ಮರವೊಂದು ಬೆಳಗಾಂ ಜಿಲ್ಲೆಯ, ಬೈಲಹೊಂಗಲ ತಾಲೂಕಿನ, ದೇವರಶಿಗಿ ಹಳ್ಳಿಯಲ್ಲಿದೆ. ಆದರೆ ಈ ಮರವು ವಿನಾಶದ ಅಂಚಿನಲ್ಲಿದೆ ಮತ್ತು ನಿರ್ಲ್ಯಕ್ಷಕ್ಕೆ ಗುರಿಯಾಗಿದೆ. ಈ ಊರಿನವರೇ ಆದ ಅಶೋಕ ಅಣ್ಣಪ್ಪನವರು ವೃತ್ತಿಯಲ್ಲಿ ಕೃಷಿಕರಾಗಿದ್ದು ಇಂತಹ ಅಪರೂಪದ ಗಿಡದ ಬಗ್ಗೆ ಕಾಳಜಿ ವಹಿಸಿದ್ದಾರೆ. ಇದರ ಬೀಜಗಳಿಂದ ಸಸಿಗಳನ್ನು ಕೂಡ ತಯಾರಿಸಿದ್ದಾರೆ. ಆಗಿನ ಕಾಲದಲ್ಲಿ ಕಿತ್ತೂರನ್ನು ಆಳಿದ ಮಲ್ಲಸರ್ಜರು ರಸ್ತೆ ಬದಿಯಲ್ಲಿ ಸಾಲು ಮರಗಳನ್ನು ನೆಡೆಸಿದ್ದರು. ಈ ಮರವೂ ಕೂಡ ಅವುಗಳಲ್ಲಿ ಒಂದು ಎಂದು ಅಶೋಕ ಅಣ್ಣಪ್ಪನವರು ಹೇಳಿದ್ದಾರೆ. ಈ ಗಿಡದಲ್ಲಿ ಬಿಡುವ ಎಲ್ಲಾಕಾಯಿಗಳು ಬಾಹ್ಯ ರೀತಿಯಿಂದ ನೋಡುವುದಕ್ಕೆ ಮತ್ತು ರುಚಿಯಲ್ಲಿ ಮಾಮೂಲು ಹುಣಸೇಕಾಯಿಗಳ ತರಹವೇ ಇದ್ದು ತಿರುಳು ಮಾತ್ರ ಬೀಟ್‌ರೂಟ್ ತರಹ ಕೆಂಪಾಗಿರುತ್ತದೆ. ಸ್ಥಳೀಯರು ಈ ಗಿಡದ ಕಾಯಿಗಳನ್ನು ನಾಟಿ ಔಷಧಿಗೆ ಬಳಸುತ್ತಾರೆ ಮತ್ತು ನಾಯಿಕೆಮ್ಮು ಬಂದಾಗ ಇದನ್ನು ತಿನ್ನುವುದರಿಂದ ಕಡಿಮೆಯಾಗುತ್ತದೆ ಎಂದು ಅಣ್ಣಪ್ಪನವರು ಹೇಳಿದ್ದಾರೆ.

ಮಾಹಿತಿ : ಅಶೋಕ ಅಣ್ಣಪ್ಪ, ಬೈಲಹೊಂಗಲ. ದೂ. ಸಂಖ್ಯೆ :9741588913

ಅಗ್ನಿ ಮುಖಿ - ಔಷಧೀಯ ಸಸ್ಯ

ಈ ಸಸ್ಯವನ್ನು ಗೌರಿ, ಲಾಂಗುಲಿಕ, ಅಗ್ನಿ ಮುಖಿ; ವಿಷಕನ್ಯೆ ಇನ್ನೂ ಮುಂತಾದ ಹೆಸರುಗಳಿಂದಲೂ ಹಾಗೂ ಸಂಸ್ಕೃತದಲ್ಲಿ ಅಗ್ನಿ ಶಿಖಾ ಎಂದೂ ಕರೆಯುತ್ತಾರೆ. ಇದರ ಸಸ್ಯ ಶಾಸ್ತ್ರೀಯ ಹೆಸರು *Gloriosa suparba.* ಗಡ್ಡೆಯಿಂದ ಮೊಳಕೆಯೊಡೆದು ಬೆಳೆಯುವ ಇದು ಬೇಲಿ, ಮರಗಿಡ ಹಾಗೂ ಪೊದೆಗಳನ್ನು ಆವರಿಸಿಕೊಂಡು ಬಳ್ಳಿಯಂತೆ ಬೆಳೆಯುತ್ತದೆ. ಸಸ್ಯಗಳಲ್ಲಿ ಬಿಡುವ ಹೂಗಳು ತಮ್ಮ ಚೆಲುವಿನಿಂದ ನೋಡುಗರನ್ನು ಆಕರ್ಷಿತರನ್ನಾಗಿ ಮಾಡುತ್ತವೆ.

ಈ ಗಿಡಗಳು ಹೆಚ್ಚಾಗಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಮುದಿಮಡಗು ಮತ್ತು ಅಡ್ಡಗಲ್ ಕಾಡುಗಳಲ್ಲಿ ಕಂಡುಬರುತ್ತವೆ. ಎಲೆಯ ತುದಿಯಲ್ಲಿ ಸುತ್ತು ಬಳ್ಳಿಯನ್ನು ಹೊಂದಿದೆ. ಹಲವಾರು ಔಷಧೀಯ ಗುಣಗಳನ್ನು ಹೊಂದಿದೆ. ಇದನ್ನು ಅಲಂಕಾರಿಕ ಸಸ್ಯವನ್ನಾಗಿ ಬೆಳೆಸಬಹುದು. ತಲೆ ನೋವು ಹಾಗೂ ಅರೆ ತಲೆನೋವಿಗೆ ಗಿಡದ ಬೇರನ್ನು 50 ಗ್ರಾಂ ನಷ್ಟು ತೆಗೆದುಕೊಂಡು 50 ಮಿ.ಲೀ. ಹಿಪ್ಪೆ ಎಣ್ಣೆಯಲ್ಲಿ ಅರೆದು ನೋವಿನ ಭಾಗಕ್ಕೆ ಹಚ್ಚಬೇಕು. ಕುಷ್ಟ ರೋಗಕ್ಕೆ ಗಿಡದ ಗೆಡ್ಡೆಯನ್ನು ಅರೆದು ದೇಹಕ್ಕೆ ಹಚ್ಚಿಕೊಳ್ಳಲಾಗುತ್ತದೆ. ಗಂಟಲು ವ್ಯಾಧಿ, ಶೀತಕ್ಕೂ ಗೌರಿ ಗಡ್ಡೆಯನ್ನು ಅರೆದು ಹಚ್ಚುವ ರೂಢಿ ಇದೆ. ಎಲೆಯ ರಸವನ್ನು ಮೂರು ದಿನಗಳ ಕಾಲ ತಲೆಗೆ ಹಚ್ಚಿದರೆ ತಲೆ ಹೊಟ್ಟು ಮತ್ತು ಹೇನು ನಿವಾರಣೆಯಾಗುತ್ತದಂತೆ. ಗಿಡದ ಬೀಜಗಳಿಂದ ತೆಗೆದ ಎಣ್ಣೆಯನ್ನು ಸಂಧಿವಾತ ಅಥವಾ ಕೀಲು ನೋವಿನ ಜಾಗದಲ್ಲಿ ಲೇಪಿಸುತ್ತಾರೆ.

ಮೂಲ : ಪ್ರಜಾವಾಣಿ, 25/9/2008

ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸ ಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.
- ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.
- ಇಲ್ಲಿ ಪ್ರಕಟಿಸಿರುವ ಪದ್ಧತಿ ಮತ್ತು ತಂತ್ರಜ್ಞಾನಗಳ ಬಳಕೆಯಲ್ಲಿ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ 'ಹಿತ್ತಲಗಿಡ' ಜವಾಬ್ದಾರಿಯಲ್ಲ.

- ಸಂಪಾದಕ

ಶ್ರದ್ಧಾಂಜಲಿ

ಹನಿ ಬೀ ಬಳಗದ ಸಕ್ರಿಯ ಸದಸ್ಯರು, ಕರ್ನಾಟಕ GIAN cell (ತುಮಕೂರು) ಮುಖ್ಯಸ್ಥರು ಮತ್ತು ಹಿತ್ತಲಗಿಡದ ತಾಂತ್ರಿಕ ಸಲಹೆಗಾರರು ಆದ ಪ್ರೊ. ಸಹಸ್ರನಾಮರವರ ಅಕಾಲಿಕ ಮರಣಕ್ಕೆ ಹಿತ್ತಲಗಿಡ ಬಳಗ ತೀವ್ರ ಸಂತಾಪ ವ್ಯಕ್ತಪಡಿಸುತ್ತಿದೆ.

ಕೊಬ್ಬಿನಾಂಶ ಕರಗಿಸಲು ಜೀರಿಗೆ

ದೇಹದ ಕೊಬ್ಬಿನಾಂಶ ಕಡಿಮೆ ಮಾಡಲು ಕಾಶ್ಮೀರ ರಾಜ್ಯದ ಮಟ್ಟಾನ್ ನಗರದ ಅರೀನಾರವರು ಜೀರಿಗೆಯಿಂದ ತಯಾರಿಸಿದ ಕಷಾಯವನ್ನು ಉಪಯೋಗಿಸುತ್ತಾರೆ. ಇವರ ಪ್ರಕಾರ ಜೀರಿಗೆ ಕಾಳುಗಳನ್ನು ನಾಲ್ಕು ಕಪ್ ನೀರಿನಲ್ಲಿ ಕಾಲು ಭಾಗ ಬರುವವರೆಗೆ ಕುದಿಸಿಕೊಳ್ಳಬೇಕು. ನಂತರ ಇದು ತಣ್ಣಗಾದ ಮೇಲೆ ಎರಡು ಚಮಚ ನಿಂಬೆಯ ರಸವನ್ನು ಸೇರಿಸಬೇಕು. ಇಂತಹ ಕಷಾಯವನ್ನು ಪ್ರತಿದಿನ ಬೆಳಗ್ಗೆ ಒಂದು ಚಮಚದಷ್ಟು ಸೇವಿಸಬೇಕೆಂದು ಹೇಳುತ್ತಾರೆ.

ವಿ.ಸೂ -ಜೀರಿಗೆಯು ಪ್ಲಾಸ್ಮಾ ಹಾಗೂ ಅಂಗಾಂಶಗಳಲ್ಲಿರುವ ಫಾಸ್ಫೋಲಿಪಿಡ್ಸ್ ಫ್ರೀ ಫ್ಯಾಟಿ ಆಸಿಡ್ಸ್ ಮತ್ತು ಟ್ರೈಗ್ಲಿಸರೈಡ್ ಕೊಬ್ಬಿನಾಂಶಗಳನ್ನು ಕಡಿಮೆ ಮಾಡುತ್ತದೆ ಎಂದು ತಿಳಿದುಬಂದಿದೆ. (ಆಧಾರ: Surya Dhandapani, Vijayakumar Ramasamy Subramanian, Senthilkumar Rajagopal And Nalini Namasivayam; Pharmacological Research 46 (3) : 251 - 255, 2002)

ಗರ್ಭನಿರೋಧಕವಾಗಿ ಗುಲಗಂಜಿ

ಗುಲಗಂಜಿ *(Abrus precatorius)* ಗಿಡದ ಕಾಳುಗಳನ್ನು ಒಣಗಿಸಿ ಪುಡಿಮಾಡಿ ತಿನ್ನುವುದರಿಂದ ಗರ್ಭಧಾರಣೆಯನ್ನು ತಡೆಯಬಹುದು ಎಂದು ಒರಿಸ್ಸಾ ರಾಜ್ಯದ, ದೇಂಕನಲ್ ನಗರದ, ಮೊಟಾರಿ ಹಳ್ಳಿಯ ಬರಲ ಅವರು ಹೇಳುತ್ತಾರೆ. ಈ ಕ್ರಮವನ್ನು ಅವರು ಮೂರು ರೋಗಿಗಳ ಮೇಲೆ ಪರೀಕ್ಷಿಸಿದ್ದಾರೆ. ತಮ್ಮ ಹಿರಿಯರಿಂದ ಕಲಿತ ಈ ವಿದ್ಯೆಯ ಬಳಕೆಗಾಗಿ ಗುಲಗಂಜಿಯ ಗಿಡಗಳನ್ನು ತಮ್ಮ ಹಿತ್ತಲಲ್ಲಿಯೇ ಬೆಳೆಸಿದ್ದಾರೆ.

ವಿ.ಸೂ -ಗುಲಗಂಜಿ ಕಾಳುಗಳಿಂದ ಶೇ.50 ಪ್ರಮಾಣದ ಎಥೆನಾಲ್‌ನೊಂದಿಗೆ ತೆಗೆದ ಅಂಶಗಳನ್ನು ಗಂಡು ಇಲಿಗಳಿಗೆ 30 ಮತ್ತು 60 ದಿನಗಳಲ್ಲಿ ಕೊಟ್ಟಾಗ ಅದು ಗರ್ಭನಿರೋಧಕವಾಗಿ ಕಾರ್ಯ ನಿರ್ವಹಣೆ ಮಾಡುತ್ತದೆ, ಎಂದು ವರದಿಯಾಗಿದೆ. (ಆಧಾರ : Rakesh Sinha; Journal of Ethnopharmacology 28 (2): 173 - 181, 1990)

ಚರ್ಮರೋಗ ಮತ್ತು ಸ್ನಾಯು ನೋವುಗಳಿಗೆ ಎಣ್ಣೆ

ಕೇರಳ ರಾಜ್ಯದ, ಕರುಣಾಪುರಂ ನಗರದ ಲೈಲಮಣಿ ರಾಜನ್‌ರವರು ಚರ್ಮರೋಗಗಳಿಗೆ ಎಣ್ಣೆ ತಯಾರಿಕಾ ವಿಧಾನವನ್ನು ತಿಳಿಸಿದ್ದಾರೆ. ನುಗ್ಗೆಕಾಯಿ *(Moringa oleifera Lam)* ಗಿಡದ 21 ತೊಗಟೆಯ ತುಂಡುಗಳನ್ನು ಒಂದು ಇಂಚು ಉದ್ದದಷ್ಟು ತೆಗೆದುಕೊಂಡು ಅದನ್ನು ಅರ್ಧ ಕೆ.ಜಿ. ಬೇವಿನ ಎಣ್ಣೆಯೊಂದಿಗೆ ಕೆಂಪು ಬಣ್ಣ ಬರುವವರೆಗೂ ಕುದಿಸಬೇಕು. ಈ ಎಣ್ಣೆಯನ್ನು ಚರ್ಮ ರೋಗಗಳಿಗೆ, ಅಂಟು ರೋಗಗಳಿಗೆ ಮತ್ತು ದೇಹದ ಸಾಮಾನ್ಯ ಸ್ನಾಯು ನೋವುಗಳಿಗೆ ಬಳಸಬಹುದು ಎಂದು ಹೇಳಿದ್ದಾರೆ.

ವಿ.ಸೂ.- ನುಗ್ಗೆಕಾಯಿ ಗಿಡದ ಹೂ, ಎಲೆಗಳು, ಬೀಜಗಳು, ಬೇರು, ಕಾಂಡ ಅಥವಾ ತೊಗಟೆ ಇವುಗಳಲ್ಲಿ ಯಾವುದಾದರೂ ಸರಿ, ಬಿಸಿನೀರಿನಲ್ಲಿ ಹಾಕಿ ಮಾಡಿರುವ ಕಷಾಯವು ಸೆಳೆತ ರೋಗಕ್ಕೆ ಮತ್ತು ಉರಿಯುವಿಕೆಯ ಪ್ರತಿರೋಧಿಯಾದ ಗುಣಹೊಂದಿರುವುದು ಇಲಿಗಳ ಮೇಲೆ ನಿರೂಪಿಸಲ್ಪಟ್ಟಿದೆ. ಅಲ್ಲದೇ ಈ ಗಿಡವು ನೋವುಗಳಿಗೆ ಮತ್ತು ಊತಗಳಿಗೆ ಔಷಧಿಯಾಗಿ ಬಳಸಲಾಗುತ್ತದೆ. (ಆಧಾರ : Armando Caceres, Amarillis Saravia, Sofia Rizzo, Lorena Zabala, Edy De Leon and Federico Nave; Journal of Ethnopharmacology 36 (3) : 233 - 237 1992.)

ಮೂಲ : ಹನಿ ಬೀ, Vol 18(3) ಮತ್ತು 18(4) ಜುಲೈ - ಡಿಸೆಂಬರ್ 2007

ಪ್ರತಿಕ್ರಿಯೆ

ಸ್ವಾಮಿ,

ನಾನು ಒಬ್ಬ ಯುವ ಜೈವಿಕ ಕೃಷಿಕ. 15 ಎಕರೆ ಭತ್ತ ಮತ್ತು 5 ಎಕರೆಯಲ್ಲಿ ಅಡಿಕೆ, ಬಾಳೆ ಇನ್ನಿತರ ಬೆಳೆಗಳನ್ನು ಬೆಳೆಯುತ್ತಿದ್ದೇನೆ. ನೂರಕ್ಕೂ ಹೆಚ್ಚು ಹಸಿರೆಲೆ ಬೆಳೆಗಳನ್ನು ಅದರಲ್ಲೂ ದ್ವಿದಳ ಜಾತಿಯ ವಾರ್ಷಿಕ, ದ್ವೈವಾರ್ಷಿಕ, ಬಹುವಾರ್ಷಿಕ ಗಿಡ, ಬಳ್ಳಿ, ಪೊದೆ, ಮರಗಳನ್ನು ನನ್ನ ಜಮೀನಿನಲ್ಲಿ ಬೆಳೆಸುತ್ತಿದ್ದೇನೆ. ಮುಖ್ಯ ಬೆಳೆಯೊಂದಿಗೆ, ಮುಂಚೆ ಮತ್ತು ನಂತರ ಈ ಹಸಿರೆಲೆ ಬೆಳೆಗಳನ್ನು ಬೆಳೆಸಿ ಬೆಳೆ ಬೆಳೆಯುವುದು ನನ್ನ ಕೃಷಿ ಪದ್ಧತಿ. ಹಸಿರೆಲೆಗಳನ್ನು ಬಿಟ್ಟರೆ ಇನ್ಯಾವುದೇ ಗೊಬ್ಬರಗಳ ಬಳಕೆ ಇಲ್ಲ. ಸಸ್ಯ ಜನ್ಯ ಕೀಟ,ಶಿಲೀಂದ್ರ ನಾಶಕಗಳ ಬಳಕೆಯೂ ಸಹ ಇಲ್ಲ. ತೋಟದಲ್ಲಿ ಉಳುಮೆ, ಅಗೆತವಿಲ್ಲ, ಕಳೆ ಕೀಳುವುದಿಲ್ಲ, ಸ್ವಚ್ಛ ಕೃಷಿಯ ವಿರುದ್ಧದ ಹಸಿರಿನೊಂದಿಗೆ ಕೃಷಿ ನನ್ನದು. ಕೃಷಿಯಲ್ಲಿನ ಕೂಲಿ ಕಾರ್ಮಿಕರ ಸಮಸ್ಯೆ, ಗೊಬ್ಬರ, ಬಿಡುವಿಲ್ಲದ ಕೆಲಸ, ಒಳಸುರಿ ಮತ್ತು ಬೆಳೆಯಲ್ಲಿನ ಸಮಸ್ಯೆಗಳಾದ ಕಳೆಗಳು, ಕೀಟರೋಗ, ಇಲಿಗಳು, ಏಡಿಗಳು ಹೀಗೆ ಹಲವಾರು ಸಮಸ್ಯೆಗಳನ್ನು ಆ ನಿಟ್ಟಿನಲ್ಲೇ ಪರಿಹಾರ ಕಂಡುಕೊಳ್ಳಲು ಆಲೋಚಿಸುತ್ತೇನೆ. ಆದರೆ ಗಿಳಿ ಸಮಸ್ಯೆಗೆ ಮಾತ್ರ ನನಗಿನ್ನೂ ಪರಿಹಾರ ಸಿಗದಾಗಿದೆ. ಜುಲೈ ತಿಂಗಳ ಕೊನೆಯಲ್ಲಿ ಅಥವಾ ಆಗಸ್ಟ್ ತಿಂಗಳಲ್ಲಿ ಹೀಗೆ ತಡವಾಗಿ ಭತ್ತದ ಬೀಜಗಳನ್ನು ಸಸಿಮಡಿಗೆ ಚೆಲ್ಲಿದ ಮರುದಿನದಿಂದಲೇ ಈ ಗಿಳಿಗಳ ಕಾಟ ಶುರುವಾಗುತ್ತದೆ. ಬೆಳಗ್ಗೆ 6 ರಿಂದ 9 ರವರೆಗೆ ನಂತರ ಸಂಜೆ 4 ರಿಂದ ಕತ್ತಲು ಆಗುವವರೆಗೆ, ಮಳೆ ಬರುವಾಗ ಇವುಗಳ ಉಪಟಳ ಕಡಿಮೆ. ಒಮ್ಮೆ ಬಂದರೆ ನೂರಾರು ಬರುತ್ತವೆ. ಒಂದೆರಡು ದಿನ ಸಸಿಮಡಿಯ ಕಡೆ ಹೋಗದಿದ್ದರೆ ಮುಗಿಯಿತು ಭತ್ತವನ್ನು ತಿಂದು ಮುಗಿಸುತ್ತವೆ. ಸಸಿಬಿಟ್ಟು 8 – 10 ದಿನಗಳವರೆಗೂ ಕಾಟ ಕೊಡುತ್ತವೆ. ಭತ್ತದ ಸಸಿ ಎರಡು ಇಂಚು ಬೆಳೆದರೂ ಸಹ ಕಿತ್ತು ಹಾಕುತ್ತವೆ. ಅವುಗಳನ್ನು ತಡೆಯಲು ರೈತರು ಸಸಿ ಮಡಿಯ ಸುತ್ತ ಕೋಲುಗಳನ್ನು ಸಿಕ್ಕಿಸಿ ದಾರವನ್ನು ಅಡ್ಡಾದಿಡ್ಡಿಯಾಗಿ ಕಟ್ಟುತ್ತಾರೆ. ಟೇಪ್‌ರೆಕಾರ್ಡರ್ ಕ್ಯಾಸೆಟ್ ರೀಲು ಕಟ್ಟುತ್ತಾರೆ. ವೀಡಿಯೋ ಕ್ಯಾಸೆಟ್ ರೀಲು ಕಟ್ಟುತ್ತಾರೆ. ಮನುಷ್ಯ ಆಕಾರದ ಬೆದುರು ಮಾಡಿ ನಿಲ್ಲುಸುತ್ತಾರೆ. ಪ್ಲಾಸ್ಟಿಕ್ ಕವರ್‌ಗಳನ್ನು ಕಟ್ಟುತ್ತಾರೆ. ಮೀನಿನ ಬಲೆ ಕಟ್ಟುತ್ತಾರೆ. ಬಲೆಗೆ ಗಿಳಿಗಳು ಬಿದ್ದಿದ್ದರೂ ಸಹ ಅವನ್ನು ಬಿಟ್ಟು ಭತ್ತ ತಿನ್ನುತ್ತವೆ. ಇದಲ್ಲದೆ ಗಿಳಿಗಳನ್ನು ಓಡಿಸಲು ತಮ್ಮಲ್ಲಿ ಯಾವುದಾದರೂ ಉಪಾಯವಿದ್ದರೆ ದಯವಿಟ್ಟು ತಿಳಿಸಿಕೊಡಿ.

ಬಿ. ಎನ್. ನಂದೀಶ್,ಚುರ್ಚಿಗುಂಡಿ – 577214, ಶಿಕಾರಿಪುರ ತಾಲೂಕು, ಶಿವಮೊಗ್ಗ ಜಿಲ್ಲೆ.

(ಈ ಬಗ್ಗೆ www.sristi.org ಅಂತರ್ಜಾಲದಲ್ಲಿ ಪ್ರಯತ್ನಿಸಿ ಜೊತೆಗೆ ಮಲೆನಾಡು ಮತ್ತಿತರ ಕಡೆಗಳ ಈ ಕೆಳಗಿನ ಕ್ರಮಗಳನ್ನು ಪ್ರಯೋಗಿಸಿ ನೋಡಿ. ಸಂ.)

ಸದ್ದು ಮಾಡುವ ಬಿದಿರಿನ ಮೊಂಟೆ :


ಬಿದಿರು ಮೊಂಟೆಗಳನ್ನು ಸ್ಥಾಪಿಸಲು ಮುಖ್ಯವಾಗಿ ಹರಿಯುವ ನೀರು ಬೇಕು. ಸ್ವಲ್ಪ ಎತ್ತರದಿಂದ ಬೀಳುವ ಹೆಬ್ಬೆರಳು ಗಾತ್ರದ ನೀರಿದ್ದರೂ ಆದೀತು. ಬಿದಿರಿನ ಮೊಂಟೆಗಳನ್ನು ತಯಾರಿಸಲು ಮೂರು ಅಡಿ ಉದ್ದವಿರುವ ಹಾಗು ಮೂರು ಅಥವಾ ನಾಲ್ಕು ಗೆಣ್ಣುಗಳಿರುವ ಬಿದಿರಿನ ಬೊಂಬನ್ನು ತೆಗೆದುಕೂಳ್ಳಬೇಕು. ಗೆಣ್ಣುಗಳ ನಡುವಣ ಅಂತರ ಜಾಸ್ತಿ ಇದ್ದರೆ ಎರಡೇ ಗೆಣ್ಣುಗಳು ಸಾಕು. ಮೊದಲಿನ ಎರಡು ಗಂಟುಗಳಲ್ಲಿ ನೀರು ಶೇಖರವಾಗುವಂತೆ ಬೊಂಬಿನ ಒಂದು ತುದಿಯ ಗೆಣ್ಣಿನಲ್ಲಿ ರಂಧ್ರ ಮಾಡಬೇಕು. ಎರಡನೆಯ ಗೆಣ್ಣಿನ ಮಧ್ಯ ಭಾಗದಲ್ಲಿ ರಂಧ್ರಮಾಡಿ ಅದಕ್ಕೆ ಮೂರು ಅಡಿ ಉದ್ದವಿರುವ ಕೋಲನ್ನು ಸಿಕ್ಕಿಸಬೇಕು. ನೀರು ಹರಿಯುತ್ತಿರುವ ಸ್ಥಳದಲ್ಲಿ ಎರಡು ಅಡಿ ಅಂತರವಿರುವಂತೆ ಎರಡು ಗೂಟಗಳನ್ನು ನಿಲ್ಲಿಸಬೇಕು. ಈ ಗೂಟಗಳಿಗೆ ಬಿದಿರು ಮೊಂಟೆಯೊಂದಿಗಿರುವ ಕೋಲನ್ನು ಕಟ್ಟಲಾಗುತ್ತದೆ. ಮೊಂಟೆಯೊಳಗೆ ನೀರು ತುಂಬಿದಾಗ ತೂಕ ಜಾಸ್ತಿಯಾಗಿ ಮುಂದಕ್ಕೆ ಬಾಗಿ ನೀರನ್ನು ಹೊರಚೆಲ್ಲುತ್ತದೆ. ನಂತರ ಹಗುರಾದ ಬೊಂಬು ಮತ್ತೆ ಮೇಲಕ್ಕೆ ಏಳುತ್ತದೆ. ಹಿಂಭಾಗ ನೆಲಕ್ಕೆ ತಾಗದಂತೆ ಆ ಸ್ಥಳದಲ್ಲಿ ತಗಡಿನ ಡಬ್ಬಿ ಇಟ್ಟರೆ ಮೊಂಟೆಯ ಹಿಂಭಾಗ ಅಪ್ಪಳಿಸಿದಾಕ್ಷಣ 'ಡಬ್' ಎಂಬ ಸದ್ದು ಕೇಳುತ್ತದೆ. ಬಿದಿರು ದೊಡ್ಡದಿದ್ದಾಗ ಮತ್ತು ನೀರಿನ ರಭಸ ಜೋರಾದಾಗ ಆವರ್ತನವೂ ಹಾಗೂ ಶಬ್ದವೂ ಹೆಚ್ಚಾಗುತ್ತದೆ. ಈ ಶಬ್ದ ಜೋರಾದಷ್ಟೂ ಪ್ರಾಣಿ, ಪಕ್ಷಿಗಳ ಹಾವಳಿಯಿಂದ ಬೆಳೆಗಳಿಗೆ ರಕ್ಷಣೆ ಸಿಗುತ್ತದೆ. ಈ ಬೊಂಬಿಗೆ ಗೆಜ್ಜೆ ಗಂಟೆಗಳನ್ನು ಕಟ್ಟುವುದಿದೆ.

ಬಿದಿರಿನ ದಬ್ಬೆ :

ಬಿದಿರಿನ ದಬ್ಬೆಗಳನ್ನು ಚಕ್ರಾಕಾರದಲ್ಲಿ ನೇಯ್ದು ಅದನ್ನು ನೀರಿಗೆ ಒಡ್ಡಿ ಇಡುತ್ತಾರೆ. ಚಕ್ರ ನಿರಂತರವಾಗಿ ತಿರುಗುತ್ತ ಹೋದ ಹಾಗೆ, ಅದರ ಹಲ್ಲುಗಳು ಹಿಂಬದಿಯ ಕಡ್ಡಿಯನ್ನು ಎತ್ತುತ್ತ, ಇಳಿಸುತ್ತಾ ಡಬ್ಬಿಗೆ ಸತತವಾಗಿ ಬಡಿಯುತ್ತ ಸದ್ದು ಮಾಡುತ್ತಿರುತ್ತದೆ. ಇಂತಹ ಶಬ್ದ ಬೇಲಿಗಳಿಂದ ಪ್ರಾಣಿ, ಪಕ್ಷಿಗಳ ಹಾವಳಿಯನ್ನು ತಡೆಯಬಹುದು.

ಕೃಪೆ: ಪ್ರಜಾವಾಣಿ, 25 ಆಕ್ಟೋಬರ್ 2000.

ಹಾಗೇ ಬೆಳೆಗಳನ್ನು ಕಾಡು ಪ್ರಾಣಿಗಳಿಂದ ರಕ್ಷಿಸುವುದಕ್ಕೆ ಇತರ ಕೆಲವು ಸರಳ ವಿಧಾನಗಳು ಈ ಕೆಳಕಂಡಂತಿವೆ.



1. ಬೆಳೆಯ ಮಧ್ಯೆ ಅಲ್ಲಲ್ಲಿ ಕೋಲು ನೆಡೆಸಿ, ಪ್ಲಾಸ್ಟಿಕ್ ಹಾಳೆಗಳನ್ನು ಕಟ್ಟಿ ಶಬ್ದ ಮಾಡುವಂತೆ ಮಾಡುವುದು. ಹಾಗೇ ಹಳೆಯ ಬಟ್ಟೆಯಿಂದ ಬೆದರು ಬೊಂಬೆಗಳನ್ನು ಮಾಡಿ ಹೊಲದಲ್ಲಿ ನಿಲ್ಲಿಸುವುದು.
2. ಸಾಮಾನ್ಯವಾಗಿ ಹಂದಿ ನೆಲವನ್ನು ಮೂಸುತ್ತಾ ಬರುತ್ತವೆ. ಕತ್ತರಿಸಿದ ಕೂದಲನ್ನು ಹೊಲದ ಸುತ್ತಲೂ ನೇಗಿಲು ಸಾಲಿನಲ್ಲಿ ಹರಡಿದಲ್ಲಿ ಕೂದಲು ಮೂಗಿಗೆ ರಾಚುವುದರಿಂದ ತಿರುಗಿ ಹೊಲದೆಡೆ ಬರುವುದಿಲ್ಲ ಮತ್ತು ಬೆಳೆಯನ್ನು ತಿನ್ನಲಾರದು.
3. ಅನಾನಸ್ ಬೆಳೆಗಳಿಗೆ ಪಕ್ಷಿಗಳ ಕಾಟ ಜಾಸ್ತಿ. ಅವುಗಳಿಂದ ಹಣ್ಣನ್ನು ಕಾಪಾಡಲು, ಹಣ್ಣು ಇನ್ನೂ ಚಿಕ್ಕದಿರುವಾಗಲೇ ಅದಕ್ಕೆ ಪ್ಲಾಸ್ಟಿಕ್ ಚೀಲವನ್ನು ತೂರಿಸಲಾಗುತ್ತದೆ.
4. ಬೆಳೆಗಳಿಗೆ ಕಾಯಿಕೊರಕ ಹುಳುಗಳು ಕಾಣಿಸಿಕೊಂಡರೆ ಆ ಹೊಲದಲ್ಲಿ ಅಲ್ಲಲ್ಲಿ ಗೂಟಗಳನ್ನು ನೆಟ್ಟು ಅವಕ್ಕೆ ನೀರು ತುಂಬಿದ ಟಬ್‌ಗಳನ್ನು ಮತ್ತು ಬಕೆಟ್‌ನಲ್ಲಿ ಅನ್ನ , ಮೊಸರು ಕಲಸಿ ನೇತುಹಾಕಿದರೆ ಪಕ್ಷಿಗಳು ಆಕರ್ಷಿತವಾಗಿ ಬಂದು ಕೂತು ಹುಳುಗಳನ್ನು ತಿಂದು ಹಾಕುತ್ತವೆ.
5. ಮಲೆನಾಡಿನ ರೈತರು ತಮ್ಮ ಬೆಳೆ ರಕ್ಷಣೆಗೆ ಹಳೆಯ ಮೀನಿನ ಬಲೆಗಳನ್ನು ಬೇಲಿಯಂತೆ ಬಳಸುತ್ತಿದ್ದಾರೆ. 8 ರಿಂದ 10 ಅಡಿ ಎತ್ತರದ ಕಂಬಗಳಿಗೆ ಬಲೆಯನ್ನು ತಂತಿಗಳ ಸಹಾಯದಿಂದ ಕಟ್ಟಿ ಪರದೆಯಂತೆ ಇಳಿ ಬಿಡುತ್ತಾರೆ. 10 ರಿಂದ 15 ಅಡಿ ಎತ್ತರಕ್ಕೆ ಕಟ್ಟಿದರೆ ಕೋತಿಗಳ ಹಾವಳಿಯನ್ನು ಕೂಡಾ ತಡೆಯಬಹುದು.

ಕೃಪೆ : ಸಿರಿಸಮೃದ್ಧಿ ಜುಲೈ – 2008, ಸಂಚಿಕೆ : 3

ಹಿತ್ತಲಗಿಡದ ಚಂದಾ ವಿವರ

ವಿಂಗಡಣೆ	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/–	ರೂ.400/–
ರೈತರು	ರೂ.60/–	ರೂ.500/–
ಇತರರು	ರೂ.75/–	ರೂ.600/–
ಸಂಸ್ಥೆಗಳು	ರೂ.350/–	ರೂ.2500/–
ಪೋಷಕರು	ರೂ.5000/– ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ ಪೋಷಕರ ವಂತಿಕೆ ಪಡೆಯಲಾಗುವುದು)

ಚಂದಾ ಹಣವನ್ನು ಅಂಚೆ (M.O.) ಅಥವಾ '*ಸಂಪಾದಕರು, ಹಿತ್ತಲಗಿಡ, ಬೆಂಗಳೂರು*' ಈ ಹೆಸರಿನ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು.

ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

Subscription Rates for *Honey Bee*

Category	South Asia* (Indian Rs.)	International (US $ Dollar)
Annual		
Individual	150	30
Supporter	500	50
Institution / Library	2,500	200
Life (15 Years)		
Individual	2,500	500
Institution / Library	10,000	1,000
Other Publications		
Spirit of Sustaninability	50	10
Nature Heals	150	20
Profiles of Innovators	175	25
Back issues of *Honey Bee*	**(1990-2003)**	
Hard Copies (Postage Extra)	1, 500 Individual	50
	5,000 Institution	200
CD	250 Individual	20
	1.000 Institution	60

* *Includes : India, Nepal, Bhutan, Bangladesh, Pakistan, Sri Lanka and the Maldives.*

Please send your contributions through bank draft/cheque in favour of **A/c Sristi Innovations** at the editorial address; C/o Prof Anil K Gupta, Editor, *Honey Bee*, Indian Institute of Management, Vastrapur, Ahmedabad- 380 015 India. Phone : 91-79-26324927,
Email : honeybee@sristi.org;

Printed by M/s Replica Offset Printers, Industrial Town, Rajajinagar, Bangalore - 560 044
Published by Smt. K. Meenakshi (Owner) at No.399, 14-B Cross, New Town Yelahanka, Bangalore-560 064,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ಏಳನೆ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (Department of Science and Technology) ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು (Intellectual Property Rights) ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 10,000 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ವ್ಯಕ್ತಿ ಹಾಗು ಸಂಸ್ಥೆಗಳಿಗೆ 50,000, 25,000 ಮತ್ತು 10,000ಗಳ ಮೂರು ವಿಶೇಷ ಬಹುಮಾನಗಳಿವೆ. ಹಾಗೇ, ರಾಜ್ಯ ಮಟ್ಟದಲ್ಲೂ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು **ರಾಷ್ಟ್ರೀಯ ದಾಖಲಾತಿ ಪುಸ್ತಕ** (National Register)ದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಮಾಡುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ. ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯೀಕರಣಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು **'ಪೂರ್ವ ಸೂಚಿತ ಸಮ್ಮತಿ'** (Prior Informed Consent) ಪಡೆದ ನಂತರವೇ ಮುಂದುವರೆಯಲಾಗುವುದು.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡುತ್ತಿದ್ದಾರೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಫೋಟೋಗಳನ್ನು, ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಏಳನೆ ಸ್ಪರ್ಧೆಗೆ ಡಿಸೆಂಬರ್ 2009ರವರೆಗೆ ಅವಕಾಶವಿದೆ. ಅನುಶೋಧನೆಗಳನ್ನು 'ಹಿತ್ತಲಗಿಡ' ಅಥವಾ National Coordinator, National Innovation Foundation, Bungalow No.1 Satellite Complex, Permchand Nagar Road, Ahmedabad - 380015 Gujarat. e-mail : campaign@nifindia.org ಇಲ್ಲಿಗೆ ಕಳುಹಿಸಬಹುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ತೆರೆದ ಅಂಚೆ

ಗೆ, ...

....

....

....

ವಿಳಾಸ

ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025
email: prakashtnk@yahoo.com